సాంఘిమ



ಸಂಚಯ

ಸಾಂಸ್ಕೃತಿಕ ಸಂಕಲನ
ದ್ವೈಮಾಸಿಕ
ಖಾಸಗಿ ಪ್ರಸಾರಕ್ಕಾಗಿ

ಸಂಪುಟ : 6
ಸಂಚಿಕೆ : 4
1993

- **ಹೊಸ ಪ್ರತಿಭೆಗಳ ಅನ್ವೇಷಣೆಗಾಗಿ**
- **ಅಭಿವ್ಯಕ್ತಿಯ ವಿಭಿನ್ನ ಸಾಧ್ಯತೆಗಳಿಗಾಗಿ**
- **ಪರ್ಯಾಯ ಚಿಂತನೆಯ ದಿಕ್ಕಿನಲ್ಲಿ**

ಸಂಪಾದನೆ/ಪ್ರಕಟಣೆ : ಸಂಚಯ ಬಳಗ

ಚಂದಾ ವಿವರ : ವಾರ್ಷಿಕ ರೂ. 45-00
ಆಜೀವ ರೂ. 300-00 (ಮೂರು ಕಂತುಗಳಲ್ಲಿ)

ಮುಖಪುಟ : ಜಿ. ಲಿಂಗದೇವರು ಅವರ ಬಾದಾಮಿ ರೇಖಾಚಿತ್ರ

ಕೃಪೆ : 'ಕ್ಯಾನ್ವಾಸ್' ಕಲಾ ಪತ್ರಿಕೆ

ಈ ಸಂಚಿಕೆಯೊಂದಿಗೆ **ಟಿ. ಎಸ್. ಪ್ರತಿಭಾ** ಅವರ ಲಿನೋಕೃತಿ

ಸಂಚಯದ ವಿಳಾಸ : 24/ಡಿ, 17ನೇ ಮುಖ್ಯರಸ್ತೆ
ಮುನೇಶ್ವರ ಬ್ಲಾಕ್
ಜಿ. ಇ. ಎಫ್. ಅಂಚೆ
ಬೆಂಗಳೂರು-560 026

ನಿಮ್ಮೊಡನೆ

ಮಹಿಳಾ ಸಂಚಿಕೆ ನಮ್ಮನ್ನೇ ನಾವು ಬೇರೆ ಬೇರೆ ದಿಕ್ಕುಗಳಿಂದ ಅವಲೋಕಿಸಿ ಕೊಳ್ಳುವ ಅವಕಾಶ ಕಲ್ಪಿಸಿತು, ಅನೇಕರ ಟೀಕೆ ವಿಮರ್ಶೆಗಳು, ನಾವು ನಮ್ಮ ಕೆಲಸ ವನ್ನು ಹೆಚ್ಚು ಪ್ರೀತಿಸುವಂತೆ ಮಾಡಿತು.

ಕನ್ನಡ ಸಾಹಿತ್ಯಲೋಕ ವಿಷಾದಿಸುವ ಸಂಗತಿ, ಎ. ಕೆ ರಾಮಾನುಜನ್ ಅವರ ಅನಿರೀಕ್ಷಿತ ಸಾವು. ಈ ಹಿಂದೆ ಹೆಚ್ಚು ಚರ್ಚೆಯಾಗದೇ ಉಳಿದ ರಾಮಾನುಜನ್ ಅವರ ಸಾಹಿತ್ಯ ಕುರಿತ ವಿಶೇಷ ಸಂಚಿಕೆಯೊಂದನ್ನು ಮುಂದಿನ ವರ್ಷದಲ್ಲಿ ರೂಪಿಸುವ ಯೋಜನೆ ಮಾಡಿದ್ದೆವು. ಕೆಲವರನ್ನು ಆ ಸಂಚಿಕೆಗೆ ಬರೆಯಲೂ ಕೇಳಲಾಗಿತ್ತು, ರಾಮಾನುಜನ್ ಬೆಂಗಳೂರಿಗೆ ಬರುವವರಾದ್ದರಿಂದ ಅವರ ಜೊತೆಗಿನ ಸಂದರ್ಶನಕ್ಕೂ ತಯಾರಿ ನಡೆಸಿದ್ದೆವು. ಆದರೆ ಕಾಲ ಇವು ಯಾವುದಕ್ಕೂ ಕಾಯುವುದಿಲ್ಲವಲ್ಲ! ಮುಂದಿನ ಸಂಚಿಕೆ ರಾಮಾನುಜನ್ ಕುರಿತು ಸಂಚಯದ ಶ್ರದ್ಧಾಂಜಲಿಯಾಗಿ ಪ್ರಕಟವಾಗಲಿದೆ. ಬೆಳಗೆರೆ ಕೃಷ್ಣಶಾಸ್ತ್ರಿ, ಎಸ್. ಎನ್. ಶ್ರೀಧರ್, ವನಮಾಲ ವಿಶ್ವನಾಥ್, ಹೆಚ್. ಎಸ್. ಶಿವಪ್ರಕಾಶ್, ರಾಮಚಂದ್ರದೇವ, ಎಲ್ಸಿನಾಗರಾಜ ಮುಂತಾದವರ ಬರಹಗಳಿರುತ್ತವೆ.

ಆಧುನಿಕ ಕನ್ನಡ ಸಾಹಿತ್ಯದ ನಿರ್ಮಿತಿಯಲ್ಲಿ ಅನೇಕ ಚಳುವಳಿಗಳನ್ನು ಬರಹ ಗಾರರನ್ನು ರೂಪಿಸುವಲ್ಲಿ ಕಿರು ಸಾಹಿತ್ಯ ಪತ್ರಿಕೆಗಳ ಮಹತ್ವಪೂರ್ಣಪಾತ್ರ ಮತ್ತು ಸಾಂಸ್ಕೃತಿಕ ಮಹತ್ವ ಗುರುತಿಸುವ ಸಲುವಾಗಿ ಆಕ್ಟೋಬರ್ 10 ರಂದು ಬೆಂಗಳೂರಿನಲ್ಲಿ 'ಕನ್ನಡ ಸಾಹಿತ್ಯ ಪತ್ರಿಕೆಗಳು ; ಇತಿಹಾಸ–ವರ್ತಮಾನ,' ಕುರಿತ ಒಂದು ದಿನದ ವಿಚಾರ ಸಂಕಿರಣ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ನಡೆಯಿತು. ಈ ಸಂಕಿರಣಕ್ಕೆ ತಯಾರಿ ನಡೆಸುವ ಸಂದರ್ಭದಲ್ಲಿನ ನಮ್ಮ ಇವತ್ತಿನ ಸಾಹಿತ್ಯ ಪತ್ರಿಕೆಗಳ ಸ್ಥಿತಿಗತಿಗಳನ್ನು ಕುರಿತ ನಮ್ಮ ಕೆಲ ಅನಿಸಿಕೆಗಳನ್ನು ಈ ಸಂಚಿಕೆ ಯಲ್ಲಿ ಚರ್ಚಿಸಲಾಗಿದೆ. ವಿಚಾರ ಸಂಕಿರಣದ ಎಲ್ಲ ಪ್ರಬಂಧಗಳನ್ನು ಸಾಹಿತ್ಯ ಅಕಾಡೆಮಿಯು ಪುಸ್ತಕವಾಗಿ ಪ್ರಕಟಿಸಲಿದೆ.

ಈ ಸಂಚಿಕೆಯಲ್ಲಿ ಕೆ.ವಿ. ಸುಬ್ಬಣ್ಣನವರ 'ಗೋಕುಲ ನಿರ್ಗಮನ' ಸಂಕ್ಷಿಪ್ತ ವಾಗಿ ಪ್ರಕಟವಾಗಿದೆ, ಅದು ಇವತ್ತಿನ ನಮ್ಮ ಮುಖ್ಯ ಸಮಸ್ಯೆಯೊಂದರ ಚರ್ಚೆ ಎನಿಸುತ್ತದೆ. ಸುಬ್ಬಣ್ಣನವರಿಗೆ ಸಂಚಯದ ಕೃತಜ್ಞತೆಗಳು.

ಸಂಪಾದಕ

ಎಂ. ಆರ್. ಭಗವತಿಯವರ ಮೂರು ಕವಿತೆಗಳು

ನಿಶಬ್ದ ಜೀವಂತಿಕೆಗಳು

ಪುಟಿಯುವ ಜೀವಂತಿಕೆ
ಈಗೆಲ್ಲೋ ಸ್ತಬ್ದ:

ನಿನ್ನ ನೋವುಗಳೆಲ್ಲ
ನನ್ನೊಡಲಿಗೇ ಕೊಳ್ಳಿಯಿಟ್ಟು
ಚೀರಿ ದಾಂಗುಡಿಯಿಟ್ಟು
ಮೂಲ ಕಾವುಗಳೆಲ್ಲ
ಚಿಗುರಿ ಚಿಗರೆಗಳಾಗಿ
ನೆನೆಸುವ ಕಾಲ:

ಅದೆಲ್ಲೋ ಬಚ್ಚಿಟ್ಟ ಭಾವಗಳು
ಪುಟಿಪುಟಿದು
ಪುಟನೆಗೆದು
ಪುಟಾಣಿ ಪುಟ್ಟಿಗಳಾಗಿ
ಪ್ರೀತಿ ಮಹಲು;
ಅಕ್ಷರಗಳ ಪ್ರೀತಿಯಿಂದ ನೇವರಿಸಿ
ಮುತ್ತಿಕ್ಕಿ
ನೀನೇ ಕಂಡಂತೆ
ಕಣ್ಣೀರೆಲ್ಲ ಮುತ್ತುಗಳಾದವೋ

ಕೊಸಕೊಸರಿ ನುಸುಳುವ
ನನ್ನ-ನಿನ್ನ
ಮೈಮನದ ಉಸಿರಾಟಗಳು
ನಿಶಬ್ದವಾಗಿ ಕೊಯ್ದು
ಉಳಿದ ಚೂರು ಪಾರು ಜೀವ
ಮುದುಮುದುರಿ ಚಿಗುರುವ
ಪ್ರೀತಿಭಾವಗಳು

ಕೆದರಿ ಕೆಕ್ಕರಿಸಿ
ಸವಿನೆನಪುಗಳೆಲ್ಲ
ಕಾಡುತ್ತಿವೆ ಕೆಂಡದುಂಡೆಗಳಾಗಿ

ತುಳಿದು ಗಾಯಗಳಾಗಿ
ಗಾಯಗಳೆಲ್ಲ ಮೈಸವರಿ
ಒಳಒಳಗೇ ಕೊಳೆಯುತ್ತಿವೆ
ನುಂಗಲಾರದ ತುತ್ತುಗಳಾಗಿ

ಬಾ ಪ್ರೀತಿಯೇ, ಮೈಮನ ಮೀರಿ
ತುತ್ತುಗಳ ತಡೆಯಂದೆಣಿಸೋದು ಬೇಡ
ಪ್ರೀತಿಯಿರಲಿ ಉಳಿದ ಜೀವಕ್ಕೆ
ನೆನೆಸುವ ಕಾಲ

ದೇಶಾಂತರ

ಕತ್ತಲಲ್ಲಿ ದೇಶಾಂತರ
ಹೋದ ನಿದ್ದೆ; ನಿದ್ದೆ
ಗಣ್ಣಲ್ಲಿ ನರಳುವ ದೆವ್ವ
ತಟವಟದ ಮನಸ್ಸು
ಹೊತ್ತುಹೊತ್ತಿಗೆ ಕಂಗೆಡಿಸುವ ಚಿಂತೆ
ಬಿಳೀ ಮನಸ್ಸಲ್ಲಿ ಕಪ್ಪು ನೆರಳುಗಳ
ಹುಡುಕುವ ಆ ರೋಗಗ್ರಸ್ಥ
ಛಾಯೆಗಳಿಗೆ ;
ಬಿಡೇ, ಕಾಣುವುದೆಲ್ಲ ಹಳದಿ:

ನಕ್ಕ ಇರುಳ ಬೆನ್ನಲ್ಲೇ ಗಹ-
ಗಹಿಸಿದ ಸದ್ದು!:
ವರ್ತಮಾನಕ್ಕೆ ನಾನೂ ಮೂಕಮೌನ
ಬೆನ್ನಲ್ಲೇ ಚೂರಿ.
ದೇಶಾಂತರ ಹೋಗು
ಪ್ರಿಯೆ,

ಹಿಂಬಾಲಿಸುವ ನೆರಳುಗಳ
ಕಾಲುಮುರಿದ ಸಾತ್ವಿಕತೆ
ಒಂದಷ್ಟು ದಾಟಿಸಿ ಹೊರಟು
            ಹೋಗಿಬಿಡೇ :
ಹುಡುಗೀ,
ನೀನೂ ದೇಶಾಂತರ ಹೊರಟು
ಹೋಗು

ಪ್ರೀತಿ

ಕಣ್ಣ ಪ್ರೀತಿ 'ಸಮಾಧಿ'ಯೊಳಗೆ
ನೆಲೆನಿಂತೆನಲ್ಲೆ ಗಟ್ಟಿಯಾಗಿ
ಕೊಚ್ಚಿಕೊಚ್ಚಿ ಕೆದಕಬೇಡಿರೋ :
ಪ್ರೀತಿ ಮಳೆಯು ಹೊಳೆಯು
ಹುಚ್ಚು
ಪ್ರೀತಿ ಸಮುದ್ರ ಸೇರುವಾಸೆ ತವಕ
      ತಡೆಯ ಬೇಡಿರೋ

ತುಂಬಿ ತುಂಬಿ ನೀರುಕುಡಿದು
ನೀರಿನಲ್ಲೆ ಈಜಿ ದಣಿದು
ಸಾಕು, ಸಾಕು, ಸಾಕು ಪ್ರೀತಿ
      ಕಲಕಬೇಡಿರೋ

ಪ್ರೀತಿಬೇರ ಬುಡ ಹಿಡಿದು
ಚೂರಿಯಂಥ ಪ್ರೀತಿ ಬಿಚ್ಚಿ ಹಿಡಿದು
ಕಣ್ಣಕೋಣೆಯಲ್ಲಿ
ಬೆಚ್ಚಗೆ ಮಲಗಿ
ಅಪ್ಪುತ್ತೇನೆ ಕಣ್ಣು ಪ್ರೀತಿ
      ಮಬ್ಬುಮಸುಕು
ಅಲ್ಲಿ ಎಲ್ಲ ನಾನೇ ತುಂಬಿ

ಆಳನೋವ ಒತ್ತಿ ಹಿಡಿದು
ನಿನ್ನ ಪ್ರೀತಿ ಜಾಡಿನಲ್ಲಿ
ನಾನು ಮಗು ಮಲಗಿ ಅಲ್ಲಿ
ಇಲ್ಲಿ ನೀನು ಜೋಜೋ ಹಾಡಿ

ಪ್ರೀತಿ ಪ್ರೀತಿ ಮೊಗ್ಗೆ ಹಿಡಿದು
ನಾನೋ ಸುಖದ ನಿದ್ರೆ ಹೊಡೆದು

ನಿನ್ನದೇ ಆಕಳಿಕೆ !

ಪ್ರತಿಕ್ರಿಯೆ

1. ಸಂಚಯ ತಲುಪಿದೆ ನಿರೀಕ್ಷೆ ಹುಸಿಯಾಯಿತು ಬಾಗೇಶ್ರೀಯ ಬರಹ ಮಾತ್ರ ಗಾತ್ರ ಕಿರಿದಾದರೂ ದೀರ್ಘಕಾಲ ಮನದೊಳಗೆ ಕಾಡಿತು ಸ್ತ್ರೀಯರು ಬರೆದದ್ದೆಲ್ಲ ಸ್ತ್ರೀವಾದ ಆಗುವುದಿಲ್ಲ ಎಂಬುದಕ್ಕೆ ನಿಮ್ಮ ಕೃತಿ ಒಳ್ಳೆಯ ಉದಾಹರಣೆ.

ಉಡುಪಿ **ವೀಣಾ ಬನ್ನಂಜೆ**

2. ಏಪ್ರಿಲ್ 93 ರ 'ಸಂಚಯ' ವಿಶೇಷ ಸಂಚಿಕೆ ಚೆನ್ನಾಗಿ ಮೂಡಿಬಂದಿದೆ. ಆಲೋಚನಾಪರವಾದ ಲೇಖನಗಳು, ಸಾಂಪ್ರದಾಯಿಕ ಚಿಂತನೆ ದಾಟಿ ಬಂದ ಸ್ತ್ರೀ ಸಂವೇದನೆಗಳು, ಸಂಚಿಕೆಯನ್ನು ಸತ್ವಯುತವಾಗಿಸಿವೆ, ಸಂಚಯ ಇನ್ನಷ್ಟು ಅರ್ಥ ಪೂರ್ಣವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಗುಲಬರ್ಗಾ **ಡಾ. ವಿಜಯ ಶ್ರೀ ಸಬರದ**

3. ನಮ್ಮ ಕಾಳಜಿಗಳೆಲ್ಲಾ ಬರೀ ಪೊಳ್ಳು ಬೊಗಳೆಗಳಾಗುತ್ತಿವೆಯೇನೋ ಎಂಬ ಆತ್ಮ ನಿರೀಕ್ಷಣೆ ನಮ್ಮನ್ನ ಕಾಡುತ್ತಿದೆ ಎಂಬ ನಿಮ್ಮ ಅಭಿಪ್ರಾಯವನ್ನು ಅನುಮೋದಿ ಸುತ್ತಾ ಅರಳುತ್ತಿರುವ ಕುಸುಮಗಳ ಅಸ್ತಿತ್ವವನ್ನು ಹತ್ತಿಕ್ಕುತ್ತಿರುವ ಪಾಶವೀತನನ್ನು ತಡೆಗಟ್ಟಲು ಕೈಗೂಡಿಸೋಣ ಎಂದೂ ಅನಿಸುತ್ತಿದೆ ಪ್ರಯತ್ನಶೀಲರಾಗೋಣ.

ಸುರತ್ಕಲ್ **ರಜಿಯಾ ಡಿ. ಬಿ.**

ಗೋಕುಲ ನಿರ್ಗಮನ

ಕೆ. ವಿ. ಸುಬ್ಬಣ್ಣ

ಆಶ್ಚರ್ಯವಾಗುತ್ತದೆ, ಸ್ವಾತಂತ್ರ್ಯ ಸಿಕ್ಕಿದ ಸಮಯದಲ್ಲಿ ಬಾಲಕರಾಗಿದ್ದ ನಮ್ಮಲ್ಲಿನ ಹುಮ್ಮಸ್ಸನ್ನು ನೆನೆದು. ಆಗ ಹಿಂದೂ ಮುಸ್ಲಿಂ ಹಗೆಯಿಂದ ದೇಶ ವಿಭಾಗವಾಗಿ, ದ್ವೇಶದಿಂದ ಹೊತ್ತಿಕೊಂಡು ದೇಶ ಉರಿದದ್ದಾಗಲೀ ಈ ದೇಶದ ಸ್ಮೃತಿ ಕ್ರಿಯೆ, ಪ್ರಜ್ಞೆಗಳ ಸಾಕಾರಮೂರ್ತಿಯಾಗಿದ್ದ ಗಾಂಧಿ ಹಂತಕನ ಗುಂಡಿಗೆ ಬಲಿಯಾದದ್ದಾಗಲೀ, ನಮ್ಮ ಮನಸ್ಸನ್ನು ಕಾಡದಷ್ಟು ನಮ್ಮ ಬಾಲಿಶ ಮನಸ್ಸು ಪುಟಿಯುತ್ತಿದ್ದುದನ್ನು ನೆನೆದು.

ಅದೇ ಸಮಯದಲ್ಲಿ ಜೋಗ ವಿದ್ಯುದ್ಯೋಜನೆಯ ಎರಡನೇ ಹಂತ ಪ್ರಾರಂಭ ವಾಗುವುದರಲ್ಲಿತ್ತು. ಮಹಾತ್ಮಗಾಂಧಿ ಯೋಜನೆ ಕಿರಿದಾಯ್ತು, ಹಿರೇಭಾಸ್ಕರ ಯೋಜನೆ ಶಿಥಿಲವಾಗುತ್ತಿದೆ ಎಂಬ ವದಂತಿ ಹಬ್ಬಿತ್ತು. ಲಿಂಗನಮಕ್ಕಿ ಜಲಾಶಯದ ನಿರ್ಮಾಣ ನೆಡೆದು, ಹಿನ್ನೀರು ನಮ್ಮೂರಿನಿಂದ 3 ಮೈಲಿ ದೂರದಲ್ಲಿ ನಿಂತಿತು. ಹಿರಿಯರು ನಿಟ್ಟುಸಿರು ಬಿಟ್ಟು ನೆಮ್ಮದಿಗೊಂಡರೆ, ನಾನು ನನ್ನ ಓರಗೆಯವರು ನೆಹರೂ ಕಟ್ಟುತ್ತಿದ್ದ ಆಧುನಿಕ ದೇವಾಲಯಕ್ಕೆ ನಮ್ಮೂರಿನ ಕಾಣಿಕೆ ಒಪ್ಪಿಸಲಾಗದ ದುರ್ದೈವಿಗಳಾದೆವಲ್ಲ ಎಂದು ಖೇದಗೊಂಡೆವು.

ಇದೆಲ್ಲ ಆಗಿ ಐವತ್ತು ವರ್ಷ ಆಗಿದೆ. ಕತೆ ಎಲ್ಲೆಡೆ ಸುತ್ತಿ, ಹಾಯ್ದು, ನಮ್ಮೆಲ್ಲರನ್ನೂ ಮೀರಿ ಬೆಳೆದಿದೆ, ಎಲ್ಲರನ್ನೂ ತಟ್ಟಿದೆ, ಮನದಟ್ಟಾಗಿದೆ. ಒಂದು ಪುಟ್ಟ ಉದಾಹರಣೆ ಹೇಳುತ್ತೇನೆ. ನಿರಂತರವಾಗಿ ಕೆಲಸ ಮಾಡುವ ಶರಾವತಿ ಯೋಜನೆಯಲ್ಲಿನ ಸ್ಥಾವರಗಳಲ್ಲಿ ಒಂದರ ವಿದ್ಯುತ್ ಕೊಲ್ಲಾಪುರದಲ್ಲಿ ತನ್ನ ಕಛೇರಿ ಯುಳ್ಳ ಉದ್ದಿಮೆಯೊಂದಕ್ಕೆ ಅತೀ ಕಡಿಮೆ ದರದಲ್ಲಿ (ಯೂನಿಟಿಗೆ 4 ಪೈಸೆ) ಸರಬ ರಾಜಾಗುತ್ತಿದೆ. ಸಂಸ್ಥೆಯ ತಂತ್ರಗಾರಿಕೆಯಿಂದ ಕರ್ನಾಟಕಕ್ಕೆ ಬರಬೇಕಿದ್ದ ಲಾಭ ಮಹಾರಾಷ್ಟ್ರಕ್ಕೆ ಹೋಯಿತು. ಉದ್ಯಮಕ್ಕೆ ನಫೆಯೊಂದೇ ನಾಣ್ಯ, ಕಣ್ಕಟ್ಟು ಮೋಸ, ವಂಚನೆಗಳು ಆದು ನಡೆಯುವ ದಾರಿ.

ಅಣೆಕಟ್ಟುಗಳಿಂದ ನಮ್ಮ ನೆಲ, ಕಾಡು, ಹೊಲಮನೆ, ಜನರ ಬದುಕು ನಾಶ ಗೊಂಡಿತು. ಪರಿಹಾರದ ಮೊತ್ತ, ಜಮೀನನ್ನು ಅರಸುವುದಕ್ಕಷ್ಟೇ ಮುಗಿದು, ಜನ ಭಿಕ್ಷುಕರಾದರು. ಅಪಾರ ವಿನಾಶದಿಂದ ಉತ್ಪತ್ತಿಯಾದ ವಿದ್ಯುತ್ ಜನರ ಬಡತನ– ಸಿರಿತನಗಳ ವೈಷಮ್ಯ ಬಡಾಯಿಸಲು ಬಳಕೆಯಾಗಿ, ಮಾರುಕಟ್ಟೆಯಲ್ಲಿನ ಗುಡಾಣ ಗಳಷ್ಟೇ ಬೆಳೆದವು. ಇದು ಕರ್ನಾಟಕದಲ್ಲಿ, ಇಡೀ ದೇಶದಲ್ಲಿ ವಿವಿಧ ರೂಪ, ಬಂಧ,

ಆಕೃತಿ ಆವೃತ್ತಿಗಳಲ್ಲಿ ಪುನರಾವರ್ತನೆಗೊಂಡಿದೆ. ನಮ್ಮ ಪ್ರಕೃತಿಸಂಪತ್ತು, ನಿಧಿ ನಿಕ್ಷೇಪಗಳು ಸ್ಥಳದಿಂದ ಗುಳೆ ಹೊರಟವು. ಈಗ ಕರಿಕಲ್ಲು ಬಂಡೆಗಳು ಜಪಾನಿಗೆ, ಅಮೆರಿಕಾಕ್ಕೆ ಹೊಳೆಯಾಗಿ ಹರಿದಿವೆ.

ಗೆಳೆಯರೊಟ್ಟಿಗೆ ಸ್ಥಾಪಿಸಿದ ನೀನಾಸಂನ ಚಟುವಟಿಕೆಗಳು ಮೊದಲು ಅತ್ಯುಬ್ಬರದಲ್ಲಿ ನಡೆದು ನಂತರ ಠುಸ್ಸೆಂದು ಸ್ಥಗಿತಗೊಂಡಿತು. ನಂತರ ನಟನಟಿಯರ ಕೊರತೆಯನ್ನು ಪರಿಹರಿಸಿಕೊಳ್ಳಲು ಮಕ್ಕಳನ್ನು ತೊಡಗಿಸಿಕೊಂಡೆವು. ಆದರೆ ಮಕ್ಕಳು ದೊಡ್ಡವರಾಗಿ ಓದಲು, ಓದುಮುಗಿದ ನಂತರ ಉದ್ಯೋಗಕ್ಕಾಗಿ ಊರು ಬಿಡುತ್ತಿದ್ದರು. ಹೆಣ್ಣುಮಕ್ಕಳು ಮೊದಲು ಮದುವೆಗಾಗಿ ನಂತರ ಉದ್ಯೋಗಕ್ಕಾಗಿ ಊರಿಂದ ನಿಷ್ಕ್ರಮಿಸುವುದು ಪ್ರಾರಂಭವಾಯಿತು.

ನನ್ನ ಈಚಿನ ಹತ್ತು ವರ್ಷದಲ್ಲಿನ ಕರ್ನಾಟಕದ ಸುತ್ತಾಟದಲ್ಲಿ ಈ ಸಮಸ್ಯೆ ಎಲ್ಲ ಕಡೆ ಕಾಣಿಸಿದೆ. ಊರಲ್ಲಿನ ಚುರುಕು ಬುದ್ಧಿವಂತ ಮಕ್ಕಳು, ಕಸುಬು ಕಲಿತ, ಕಲಿಯಬೇಕಾದ ಮಕ್ಕಳು ಊರು ಬಿಡುತ್ತಾರೆ, ಸಮುದಾಯ ದುರ್ಬಲವಾಗಿ ದರಿದ್ರವಾಗುತ್ತದೆ ಒಂದು ಕಡೆ ನಮ್ಮ ಹೊಳೆಗುಡ್ಡ, ಮರ ಮಣ್ಣು, ನೀರು, ಕಲ್ಲು ಹರಿದುಹೋಗುತ್ತಿವೆ, ಅದಕ್ಕಿಂತ ಗಂಭೀರವಾದದ್ದೆಂದರೆ, ನಮ್ಮ ಮಕ್ಕಳು ನಮ್ಮಿಂದ ಕಳೆದುಹೋಗುತ್ತಿದ್ದಾರೆ. ನಾನು ಜನರೊಡನೆ ಈ ವಿಷಯ ಪ್ರಸ್ತಾಪಿಸಿದಾಗ, ಜನ ಖಿನ್ನರಾಗುತ್ತಾರೆ, ಅಂತರ್ಮುಖಿಗಳಾಗುತ್ತಾರೆ. ಎರಡನೇ ಮಹಾ ಯುದ್ಧ ಮುಗಿಯುವ ಹೊತ್ತಿಗೆ ಯುರೋಪಿನ ಊರುಗಳಲ್ಲಿ ಇದ್ದ ಸ್ಥಿತಿ ಇದು. ತರುಣರೆಲ್ಲ ಯುದ್ಧಕ್ಕೆ ಬಲಿಯಾಗಿ, ಉಳಿದವರು-ಮುದುಕರು, ಮಕ್ಕಳು, ಹೆಂಗಸರು ಮತ್ತು ಅಂಗವಿಕಲರು. ಕಿಂದರಜೋಗಿ ಕಥೆಯಲ್ಲಿ ಕೊನೆಗೆ ಉಳಿದ ಕುಂಟನ ರೀತಿ, ಸ್ಮೃತಿಯಾಗಿ, ಆ ಸ್ಮೃತಿಯನ್ನು ಗ್ರಹಿಸಲಿಕ್ಕೂ ಇನ್ನೊಂದು ಜೀವ ಬದಿಗಿಲ್ಲದ ಪಿಶಾಚ ಸ್ಮೃತಿಯಾಗಿ ದಿನದ ಕೊನೆಗೆ, ಕಟ್ಟೆಯಂಚಿಗೆ ಕೂತು ಮುಳುಗುವ ಸೂರ್ಯನ ಕಡೆ ಮಂಜುಗಣ್ಣು ಹಾಯಿಸಿ ತಮ್ಮ ಹೊಸ ಪ್ರಾಯದ ಮಕ್ಕಳು, ಕಣ್ಣಿನ ಗೊಂಬೆಗಳು, ಕರುಳಿನ ಚಿಗುರುಗಳು, ಹೊಕ್ಕುಳಿನ ಮೊಗ್ಗುಗಳು ಮಾಯಕದಲ್ಲಿ ಕಳೆದುಹೋಗುತ್ತಿರುವುದನ್ನು ನೆನೆಯುತ್ತಾ, ನಿಟ್ಟುಸಿರು ಬಿಡುವ ಮುದುಕರ ಸಾಲು ಚಿತ್ರ ಕಣ್ಣಿಗೆ ಕಟ್ಟುತ್ತದೆ. ದುಃಖದಿಂದ ಹೆದರಿ ಸರ್ಕಾರ, ರಾಜಕಾರಣಿ, ವಿದ್ಯಾಭ್ಯಾಸ-ಇವೆಲ್ಲವನ್ನೂ ದೂರುತ್ತೇವೆ. ದೂರುತ್ತ ,ಕೈಹಿಸುಕಿಕೊಳ್ಳುತ್ತೇವೆ. ಆದರೆ ಇದಕ್ಕೆಲ್ಲ ಬೀಜ ಬಿತ್ತಿದವರು ನಾವೇ ನಮ್ಮ ಪುಟ್ಟ ಮಕ್ಕಳು ಬಗಲಿಗೆ ಚೀಲ ನೇತುಹಾಕಿಕೊಂಡು ಅ ಆ ಇ....ಕಲಿಯಲು ಹೊರಟಾಗ ಆತ ಏನಾಗಬೇಕು' ಇಂಜನಿಯರ್, ಡಾಕ್ಟರ್-ಎಂಬುದರ ಬಗ್ಗೆ ವಾಗ್ವಾದ ಪ್ರಾರಂಭ ಅಗುತ್ತದೆ. ಮಕ್ಕಳ ಮುಂದಿನ ದಾರಿಯನ್ನು ಇಂಗ್ಲೆಂಡ್ ಅಮೆರಿಕಾದ ಮಹಾನಗರಗಳೆಡೆಗೆ ಗೆರೆಯೆಳೆದು ಗುರುತಿಸತೊಡಗುತ್ತೇವೆ.

ನಮ್ಮ ಕಡೆಯ ಊರೆಂದರೆ ಈಗಲ್ಲ, ಆಗ ಎರಡು ಮೂರು ಅಥವಾ ಹತ್ತೆಂಟು

ಮನೆಗಳು–ಎದುರು ಅಡಿಕೆ ತೋಟ, ಹಿಂಬದಿಗೆ ಎತ್ತರದ ಧರೆ, ಧರೆಯಂಚಿಗೆ ಕವಿದ ದಟ್ಟ ಕಾಡು. ಆರು ತಿಂಗಳ ಕಾಲ ಮಳೆ, ಅದರಲ್ಲಿ ಮೂರು ತಿಂಗಳಕಾಲ ಅಬ್ಬರದ ಏಕೋಧಾರೆ ಕಾರ್ಗಾಲ. ಮನೆಯೊಂದು ಪ್ರತ್ಯೇಕ ಜಗತ್ತು, ಜಗಲಿ ಪ್ರತ್ಯೇಕ ಜಗತ್ತು. ರಾತ್ರಿ ವೇಳೆ ಬೆಂಕಿ ಎದುರು ಕೂತ ವ್ಯಕ್ತಿ ಪ್ರತ್ಯೇಕ ಜಗತ್ತು, ಇಂತಹ ನಿಸ್ಸಂಪರ್ಕ ಜಗತ್ತಿನ ಏಕಾಂತ ರಾತ್ರಿಗಳಲ್ಲಿ. ನನ್ನ ಅಮ್ಮ ಹೇಳುತ್ತಿದ್ದ ದೂರದ ಮೇಲುಕೋಟೆಯ ಪುತಿನ ಅವರ ಗೋಕುಲ ನಿರ್ಗಮನ ಗೀತ ನಾಟಕವನ್ನು. ಮೊನ್ನೆ ಮತ್ತೊಮ್ಮೆ ಓದಿದಾಗ, ಸದ್ಯದ ತಳಮಳದಲ್ಲಿ ಅದು ನನ್ನನ್ನು ಬೇರೆ ಬೇರೆ ಆಳಗಳಲ್ಲಿ ತಟ್ಟಿತು. ಕಥಾ ಪ್ರಸಂಗ ಭಾಗವತದ್ದು-ಗೊಲ್ಲರ ಪುಟ್ಟ ಸಮುದಾಯದಲ್ಲಿ ಬಲರಾಮ, ಕೃಷ್ಣ, ಅವರ ಜೊತೆಯ ಗೋಪಾಲಕರು, ಗೋಪಿಕೆಯರು, ರಾಧೆ–ಎಲ್ಲ ಒಟ್ಟಿಗೆ ಬದುಕುತ್ತಿದ್ದಾರೆ. ಕೃಷ್ಣ, ಅವನ ಕೊಳಲು, ಕೊಳಲಿನ ಗಾನದಿಂದ ಆಕರ್ಷಿತಳಾದ ರಾಧೆ, ಗೋಪಿಕೆಯರು. ಆತಂಕಗೊಂಡ ಹಿರಿಯರು. ಅಂದು ಸಂಜೆ ಅಕ್ರೂರ ಬಲರಾಮ ಕೃಷ್ಣರನ್ನು ಬಿಲ್ಲ ಹಬ್ಬಕ್ಕೆ ಮಧುರೆಗೆ ಕರೆದೊಯ್ಯಲು ಬಂದಿದ್ದಾನೆ. ಎಲ್ಲರ ಒತ್ತಾಯಕ್ಕೆ ಮಣಿದ ಕೃಷ್ಣ ಕೊಳಲನ್ನು ನೆಲಕ್ಕೆ ಬಿಸುಟು ಹೊರಡುತ್ತಾನೆ. ದುಃಖಿತ ರಾಧೆ ಗೋಪಿಕೆಯರು ಕೊಳಲನ್ನು ಮರದ ಬುಡದ ಗರಿಕೆಯ ಎಡೆಯಲ್ಲಿ ಬಚ್ಚಿಡುತ್ತಾರೆ.

ಅನುಮಾನದಿಂದ ಒಂದು ಮಾತು ಸೇರಿಸುತ್ತೇನೆ. 50ರ ದಶಕದಲ್ಲಿ ನಾನು ಮೈಸೂರಿನಲ್ಲಿ ಓದುತ್ತಿದ್ದಾಗ ಸಾಗರದವರೇ 4-5ಜನ ಅಲ್ಲಿದ್ದಿರಬಹುದು. ಇಂದವರ ಸಂಖ್ಯೆ, ಬೆಂಗಳೂರೊಂದರಲ್ಲೇ ಸಾವಿರಾರು, ಅದರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಸಣ್ಣದೇನಲ್ಲ. ನಮ್ಮೂರಿನವರೇ ಸ್ಥಾಪಿಸಿರುವ ಉದ್ಯಮವೊಂದರಲ್ಲಿ ನಮ್ಮೂರಿನ ಹೆಣ್ಣು ಮಕ್ಕಳೇ ಬಹುಸಂಖ್ಯಾತರು. ನಾನು ಆ ಕಾರ್ಖಾನೆಯನ್ನು ನೋಡಲು ಹೋದಾಗ ಸಂಜೆ, ಸೂರ್ಯ ಕಂತುತ್ತಿದ್ದ, ಆಯಕಟ್ಟಿನ ಜಾಗದಲ್ಲಿರುವ ಕಾರ್ಖಾನೆಯಿಂದ ಕೆಲಸ ಮುಗಿಸಿ ಐದಾರುನೂರು ಮಂದಿ ಹೆಣ್ಣು ಮಕ್ಕಳು ಮುಂದಣ ಬಾಗಿಲಿನಿಂದ ಬರತೊಡಗಿದರು. ನೋಡುತ್ತಿದ್ದ ನನಗೆ, ಹೇಗೆ ಹೇಳಲಿ, ಅರ್ಧ ಬೆಂದ ಹೆಣಗಳು ಈಗಷ್ಟೇ ಚಿತೆಯಿಂದ ಎದ್ದು ಬರುತ್ತಿದ್ದ ಹಾಗೆ ಕಂಡಿತು. ಇದೇ ಹೆಣ್ಣು ಮಕ್ಕಳು ಊರಿಗೆ ಯಾವುದಾದರೂ ಮದುವೆಗೆ ಬಂದಾಗ, ತಲೆ ಮೈಮುಖ ಸಿಂಗರಿಸಿಕೊಂಡು ಚಿಗರೆಗಳ ಹಾಗೆ ಕೆಲಸ ಮಾಡುತ್ತಾರೆ. ಬಡಿಸಿ, ಬಳಿದು, ಕಡೆಗೆ ಉಂಡು, ಎಲೆಯಡಿಕೆಯಿಂದ ಕೆಂಪಾದ ತುಟಿಗಳನ್ನು ಸೂರ್ಯನಿಗೆ ತೋರಿಸುತ್ತಾ ಉನ್ಮುಕ್ತರಾಗಿ ನಗುತ್ತಾರೆ, ಹರಟುತ್ತಾರೆ.

ಭಾವುಕತೆ ನನ್ನ ಉದ್ದೇಶವಲ್ಲ. ಊರಿನ ಜನಸಂಖ್ಯೆ ಈಗ ಹೆಚ್ಚಿದೆ, ಉದ್ಯೋಗಾರ್ಥಿಯಾಗಿ ವಲಸೆ ಹೋಗುವುದೂ ಕೆಲಮಟ್ಟಿಗೆ ಅನಿವಾರ್ಯವೇ, ಅದಲ್ಲದೆ ತರುಣರಿಗೆ ಸ್ಥಳೀಯ ಕಿರುಸಮುದಾಯದ ಜಡಕಟ್ಟಳೆಗಳಿಂದ ಲಕಲಕ ಹೊಳೆಯುವ ಪಾಶ್ಚಾತ್ಯ ನಾಗರೀಕತೆಯೆಡೆಗೆ ಓಡುವುದು ಬೇಕೆನ್ನಿಸಿರಬಹುದು.

ಮುಖ್ಯವಾಗಿ, ಸ್ತ್ರೀ ಮತ್ತು ದಲಿತ ಜಾತಿಗಳವರಿಗೆ ತಮ್ಮ ವಿಷಮ ಸಮಾಜದ ನಿಶ್ಚಲತೆಯನ್ನು ದಾಟುವುದು, ಯಾವುದರಿಂದ ತಾವು ವಂಚಿತರಾಗಿದ್ದರೋ ಅದನ್ನು ಅಥವಾ ಅದರ ಬದಲಿಗೆ ಇನ್ನೊಂದನ್ನು ಪಡೆಯಲಿಕ್ಕೆ ವಲಸೆಯೇ ಮಾರ್ಗವೆನಿಸಿತು.

ಗೋಕುಲದ ಪುಟ್ಟ ಸಮುದಾಯದಲ್ಲಿದ್ದ ಗೋಪಬಾಲಕರಿಗೆ ನಿಶ್ಚಲವೆನಿಸಿದ್ದ ಇದೇ ಊರು. ಅವೇ ಆಟಗಳು, ಅದೇ ಕೆಲಸ ಸಾಕಷ್ಟು ಬೇಸರ ಹುಟ್ಟಿಸಿರಬೇಕು. ಅದೇ ಒತ್ತಡ ಅವರನ್ನು ಮಧುರೆಗೆ ಎಳೆಯಿತೇ ?

ಉದ್ಯಮಿ ಗೆಳೆಯರ ಪ್ರಮಾಣಿಕ ಸದಾಶಯವನ್ನು ನಾನು ಪ್ರಶ್ನಿಸುವುದಿಲ್ಲ, ಆದರೆ ಈ ಬೆಳವಣಿಗೆಗೆ ಇರುವ ಇನ್ನೊಂದು ಮುಖದ ಭೀಕರತೆಯನ್ನು ಕಂಡು ಕಳವಳಗೊಳ್ಳುತ್ತೇನೆ, ಕಲಕಿ ಹೋಗುತ್ತೇನೆ. ನಗರ ಸೇರಿದ ಈ ಹಳ್ಳಿಯ ಹೆಣ್ಣು ಮಕ್ಕಳು, ತಮ್ಮ ಸರೀಕ ಹಳ್ಳಿಯ ಹೆಣ್ಣುಗಳಂತೆ ಉತ್ಸಾಹ ತುಂಬಿದ ಮಾನವಂತ ಬದುಕು ಬದುಕಿಯಾರೇ ? ಬೆಳಗಿನಿಂದ ಸಂಜೆಯವರೆಗಿನ ಯಾಂತ್ರೀಕೃತ ಬದುಕು, ಆ ದುಡಿಮೆ ತಂದ ಅಲಂಕಾರ ವಸ್ತು ಯಾರಿಗೆ ಮುದ ಕೊಟ್ಟೀತು ಎಂಬುದನ್ನು ಕಲ್ಪಿಸಲೂ, ಕನಸಿಸಲೂ ಆಗದ ಯಾಂತ್ರಿಕ ದುಡಿಮೆ, ಗಳಿಸುವ ಹಣ ನಗರದ ದುಬಾರಿ ಜೀವನ ಮಟ್ಟದಲ್ಲಿ ಮಾನವಂತ ಬದುಕು ಬದುಕಲು ಸಾಲದು, ಮತ್ತೆ ಊರಿಗೆ ಮರಳುವುದು ನಾಚಿಕೆಯ ವಿಷಯ, ಅಲ್ಲದೆ ಊರಿನವರಿಗೆ ತನ್ನ ನಗರ ಜೀವನ ಚೆನ್ನಾಗಿದೆಯೆಂದು ತೋರಿಸಲು ನಾಟಕ ಮಾಡಬೇಕು ನಗರ ಸೇರಿದವರಗೆ ಹಳ್ಳಿಯ ವ್ರತ, ನೇಮ, ಮದುವೆ, ಹಬ್ಬ, ಹಾಡು, ಕೈಗೆಲಸ ನಷ್ಟವಾಗಿ, ಹುಚ್ಚು ಹಿಡಿಯದೆ ಉಳಿಯಲಿಕ್ಕೆ ಉಳಿಯುವುದು, ಟಿ.ವಿ. ಕಡಕ್ಕೆ ಹಂಚುವ, ದುಬಾರಿಯಾದ ಸುಳ್ಳು ಕನಸುಗಳು, ನಗರ ಬದುಕಿನ ಈ ಹಗ್ಗದ ಮೇಲಿನ ಬಿಗಿನಡೆಯಲ್ಲಿ, ಸೆಳೆತಗಳಲ್ಲಿ ನಮ್ಮ ಹೆಣ್ಣು ಮಕ್ಕಳು ಯಾವ ಕ್ಷಣದಲ್ಲಾದರೂ ಜೋಲಿ ತಪ್ಪಿ ಬೀಳಬಹುದು. ಬೀಳುವುದೆಲ್ಲಿಗೆ ? ನೆನೆದರೆ ನಡುಕ ಬರುತ್ತದೆ. ಇದು ಇಂದು ಭಾರತದ ಎಲ್ಲ ಸಮಾಜ ಗಳೂ ಎದುರಿಸುತ್ತಿರುವ ಕಠಿಣ ಪ್ರಶ್ನೆ. ಇದಕ್ಕೆ ಉತ್ತರ ಕಂಡುಕೊಳ್ಳುವಲ್ಲಿ ನಾವು ಸೋಲುತ್ತಿದ್ದೇವೆಯೇ ? ನಾಶವಾಗುವುದನ್ನು ತಪ್ಪಿಸಲು ಉಪಾಯವೇನಿದೆ ?

ಚರಿತ್ರೆ–ಜೀವವಿರುವ ನಮ್ಮ ಮುಂದೆ, ಸತ್ತದ್ದನ್ನು ಕಾಣಿಸುವ ಪ್ರಯತ್ನ. ಜನಾಂಗವೊಂದರ ಭೂತಕಾಲದ ಬೇರುಗಳು ಚರಿತ್ರೆಯಲ್ಲಿ ಸಂಚಯನಗೊಂಡು ಬರುತ್ತದೆ ಎಂಬುದು ಮಾರ್ಕ್ಸ್ ಆದಿಯಾದ ಎಲ್ಲ ಚಿಂತಕರ ನಂಬಿಕೆಯಾಗಿತ್ತು. ಆದರೆ ಭಾರತಕ್ಕೆ ಚರಿತ್ರೆ ಎಂದೂ ಮುಖ್ಯವಾಗಲಿಲ್ಲ, ಅದು ಗಣಿಸಿದ್ದು-ಸ್ಮೃತಿಯನ್ನು. ಸ್ಮೃತಿಯಲ್ಲಿರುವುದು ಚರಿತ್ರೆಯ ವಿವರಗಳಲ್ಲ, ಅದರ ಅರ್ಕ. ಇದು ಚರಿತ್ರೆಯ ವಿವರಗಳಂತೆ ಗುಡ್ಡೆಯಾಗದೆ, ನಮ್ಮೊಳಗೆ ಜಿನುಗಿ, ರಕ್ತಗತವಾಗಿ, ನಮ್ಮ ನೋಟ, ಕೆಲಸದಲ್ಲಿ ತೊಡಗಿಕೊಳ್ಳುತ್ತದೆ.

ಕಾಥೇವಾಡದ ಬನಿಯಾ ಆಗಿ ಹುಟ್ಟಿದ ಗಾಂಧಿಯಲ್ಲಿ, ಈಶಾವಾಸ್ಯದಿಂದ ಕಬೀರನವರೆಗೆ, ಎಲ್ಲ ಸಂಸ್ಕೃತಿ, ಸಮಸ್ತಗಳೂ ಸ್ಮೃತಿಯಾಗಿ ಸೇರಿಕೊಂಡಿತ್ತು.

'ರಾಮ' ಎಂದು ಹೇಳುತ್ತಲೇ ಬದುಕಿನ ಆತ, ಗುಂಡು ಸಿಡಿದು ಸತ್ತಾಗಲೂ ಹೇಳಿದ್ದು–ಹೇ ರಾಮ್. ಮಹಾಭಾರತ ಯುದ್ಧ ನಡೆಯತೆಂಬ ಚಾರಿತ್ರಿಕ ಅಂಶ ವನ್ನು ನಂಬದ ಆತ, ಪ್ರಪಂಚದ ಎಲ್ಲ ಮಾನವೀಯ ಅಂಶಗಳನ್ನು ಸೇರಿಸಿ 'ರಾಮ ರಾಜ್ಯ'ದ ಅದ್ಭುತಪಾಕ ಸೃಷ್ಟಿಸಿದ. ಪಾಶ್ಚಾತ್ಯ ನಾಗರಿಕತೆಯ ಗರ್ವ ಮತ್ತು ಅಭಿವೃದ್ಧಿಯ ಬೆಂಬತ್ತಿದ ರಾಷ್ಟ್ರಗಳ ಅನುಕರಣೆಯ ಛಲ, ಆದು ನಮ್ಮಲ್ಲಿ ತಂದ ತಲ್ಲಣಕ್ಕೆ ಉತ್ತರ–ಸ್ಮೃತಿಯಲ್ಲಿ ಸಿಗಬಹುದೇ ?

ಎಲ್ಲರೂ ತಿಳಿದಂತೆ ಮನುಷ್ಯ ಒಂದು ಸ್ವತಂತ್ರ ಘಟಕವಲ್ಲ, ಜೀವಂತ ಸಮೂಹವೊಂದರ ಒಂದು ಅಂಗ. ಸಮೂಹವು ಮಾನವಕುಲವೆಂಬ ಸಮಷ್ಟಿಯ ಅಂಗ. ಪ್ರಸ್ತುತವೆಂಬುದು ಈ ಮಾನವ ಕುಲದ ಬದುಕಿನ ಅತೀ ಚಿಕ್ಕ ಚೂರು. ಸ್ಮೃತಿಯಿಂದ ಸಂಪನ್ನನಾದ ಮನುಷ್ಯ ಇಡೀ ಮಾನವಕುಲದ ಮೊನೆ, ತೆನೆ ಆಗು ತ್ತಾನೆ, ಆಗ ಆತ ಮಾಡುವ ನಿರ್ಣಯ ಇಡೀ ಮಾನವಕುಲದ ನಿರ್ಣಯ ಆಗುತ್ತದೆ. ಇವತ್ತು ಇಲ್ಲಿ ಬದುಕುತ್ತಿರುವ ನಾನು ಇಡೀ ಮಾನವಕುಲದ, ವಿಶ್ವದ ಸಮಸ್ತ ಆಸ್ತಿಗೂ, ಜವಾಬ್ದಾರಿಗಳಿಗೂ ಹಕ್ಕುದಾರ, ಹೊಣೆಗಾರ, ಇದರಲ್ಲಿ ಯಾವುದನ್ನೂ, ನಾನು ನಿರಾಕರಿಸಲಾರೆ. ಎಲ್ಲವನ್ನೂ ಒಳಗೊಂಡ ನನ್ನ ನಿರ್ಣಯ ಸಹಜ, ಸಾಧು ಮತ್ತು ಸುಷ್ಠು.

ನಮ್ಮಲ್ಲಿ ಕಲೆ, ಕಾವ್ಯ, ಸಂಸ್ಕೃತಿಗಳು ಸ್ಮೃತಿಯ ಬೆಳವಣಿಗೆ ಮತ್ತು ಉನ್ನತಿ ಗಾಗಿಯೇ ದುಡಿಯುತ್ತವೆ. ನಮ್ಮ ಭಾಗವತ ಗ್ರಂಥ, ಪಂಥಗಳು ಇವತ್ತು ನಮಗೆ ಬಲು ಮುಖ್ಯವಾಗುತ್ತವೆ. ಗೋಕುಲದಂಥ ಪುಟ್ಟ ಗ್ರಾಮೀಣ ಭಾಗವತ ಸಮುದಾಯ ತೀರ ಭಿನ್ನ ಸಂಸ್ಕೃತಿಯಾಗಿದ್ದೂ, ಮಾನವಂತ. ಘನತೆಯ ಬದುಕು ಬಾಳಿದ್ದಲ್ಲದೆ, ಸಾಮ್ರಾಜ್ಯದ ಏಕ ಛತ್ರದಡಿಯಲ್ಲಿ ಸ್ವತಂತ್ರ ಸಮುದಾಯ ಎನಿಸಿ ಕೊಳ್ಳಲು ಸಾಧ್ಯ ಆಗಿದ್ದು-ಸ್ಮೃತಿಯ ಉದ್ದೀಪನದಿಂದಲೇ ಇಂದು ನಮ್ಮ ಜೀವ ತುಳುಕಾಡಿಸುವ ಎಲ್ಲ ತಲ್ಲಣಗಳ ಮಧ್ಯೆ, ಫ್ಯಾಕ್ಟರಿಗಳಿಂದ ಬೆಂದು ಹೊರಬರುವ ನಮ್ಮ ಎಳೆಯ ಹೆಣ್ಣು ಮಕ್ಕಳು, ನಗರ ರಸ್ತೆಗಳಲ್ಲಿ ದಿಕ್ಕು ಗಾಣದೆ ಆಯುಷ್ಯ ತೇಯುತ್ತಿರುವ ನಮ್ಮ ಕೆಚ್ಚು ಕುಡಿ ಗಂಡುಗಳು. ಬಿಕೋ ಎನ್ನುವ ಜೋಳು ಹಳ್ಳಿ ಗಳು–ಇತ್ಯಾದಿ ವಾಸ್ತವಗಳ ಮಧ್ಯೆ ಹತಪ್ರದರಾಗದೆ ಸ್ಥಿರವಾಗಿ ನಿಲ್ಲಲು, ನಿಂತು ಧೈರ್ಯದಿಂದ ಮುಂದಣ ದಾರಿಯನ್ನು ಶೋಧಿಸಲು–ನಮಗೆ,ನಮ್ಮ ಸಮುದಾಯಕ್ಕೆ ದೇಶಕ್ಕೆ ಸ್ಮೃತಿಯ ಉದ್ದೀಪನ ಸಂಪನ್ನತೆ ಬೇಕು. ಹಾಗಾದಾಗಷ್ಟೆ ನಮಗೆ ಬೆಳಕು ಕಂಡು, ಕತ್ತಲೆ ಕಳೆದು, ನಮ್ಮ ಮುಂದೆ ಸತ್ಯದ ಹೊಸ ದಿಗಂತ ಕಂಡೀತು.

ಕೃಪೆ : ಮಾತುಕತೆ ನೀನಾಸಂ, ಹೆಗ್ಗೋಡು : ಸಂ 27
(ಲೇಖನದಿಂದ ಆಯ್ದ ಕೆಲವು ಭಾಗಗಳನ್ನು ಪ್ರಕಟಿಸಲಾಗಿದೆ.)

ಸಾಂಸ್ಕೃತಿಕ ಸಂವಹನಕ್ಕೆ ಹೊಸ ಮಾಧ್ಯಮಗಳು

ಡಾ || ಸಿ. ಪಿ. ರವಿಕುಮಾರ್

ವಿಲಿಯಂ ವರ್ಡ್ಸ್‌ವರ್ತ್ ಕವಿಯ ''The World is too much with us'' ಕವಿತೆಯಲ್ಲಿ ನಿಸರ್ಗದಿಂದ ಮನುಷ್ಯ ದೂರ ಸರಿಯುತ್ತಿರುವ ಬಗ್ಗೆ ಚಿಂತನೆಯಿದೆ. ಕವಿತೆಯ ಅನುವಾದವನ್ನು ಲೇಖನದ ಕೊನೆಯಲ್ಲಿ ಕೊಟ್ಟಿದ್ದೇನೆ. ವರ್ಡ್ಸ್‌ವರ್ತ್ ಕಾವ್ಯರಚನೆಗೆ ತೊಡಗಿದ್ದು ಹದಿನೆಂಟನೇ ಶತಮಾನದ ಕೊನೆಯ ವರ್ಷಗಳಲ್ಲಿ, ಆಗ ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಯೌವ್ವನಾವಸ್ಥೆ ತಲುಪಿತ್ತು. ಆದರೂ ಅಂದಿನ ಜೀವನಕ್ರಮಕ್ಕೂ ನಮ್ಮ ಇಂದಿನ ಬದುಕಿಗೂ ಅಜಗಜಾಂತರ. ಆಗ ದೂರಸಂಪರ್ಕದ ಯಾವುದೇ ಮಾಧ್ಯಮಗಳಿರಲಿಲ್ಲ. ಟೆಲಿಫೋನ್, ಟೆಲಿಗ್ರಾಫ್, ರೇಡಿಯೋ ಇದಾವುದನ್ನೂ ಕಾಣದಿದ್ದ ವರ್ಡ್ಸ್‌ವರ್ತ್ "ವಿಪರೀತವಾಯ್ತು ನಮಗೆ ಇಹದ ಸಹವಾಸ" ಎಂದು ಉದ್ಗರಿಸಿದ. ಫ್ಯಾಕ್ಸ್, ಕೃತಕ ಉಪಗ್ರಹಗಳು, ಕೇಬಲ್ ಟೀವಿ, ಕಂಪ್ಯೂಟರ್ ನೆಟ್‌ವರ್ಕ್‌ಗಳ ಯುಗದಲ್ಲಿ ಬದುಕುತ್ತಿರುವ ನಾವು ಏನೆಂದು ಉದ್ಗರಿಸೋಣ ?

ತಂತ್ರಜ್ಞಾನ ಹಿಂದೆಂದೂ ಕಾಣದಿದ್ದ ವೇಗ ಪಡೆದುಕೊಂಡು ನಮ್ಮನ್ನು ಇಪ್ಪತ್ತೊಂದನೇ ಶತಮಾನಕ್ಕೆ ಎಳೆದುಕೊಂಡು ಹೋಗುತ್ತಿದೆ. ಕಾರ್‌ನಲ್ಲಿ ಕುಳಿತು ರಭಸವಾಗಿ ಸಾಗುವುದು ಕೆಲವರಿಗೆ ಮೋಜಿನ ಸಂಗತಿಯಾದರೆ ಕೆಲವರಿಗೆ ಅದು ಉಸಿರು ಕಟ್ಟಿಸುತ್ತದೆ. ಕಾರ್‌ನಲ್ಲಿ ಪ್ರಯಾಣ ಮಾಡುತ್ತಿರುವ ನಮ್ಮೊಂದಿಗೆನಮ್ಮ ಸಂಸ್ಕೃತಿಯ ರೂಪಗಳೂ ಇವೆ.

ದೂರಸಂಪರ್ಕ ಮಾಧ್ಯಮಗಳು ಹೆಚ್ಚು ಪ್ರಬಲಗೊಂಡಂತೆ ನಮ್ಮ ಸಂಸ್ಕೃತಿಯ ಮೇಲೆ ಈ ಪ್ರಗತಿಯ ಪರಿಣಾಮಗಳು ಕಾಣಿಸಿಕೊಂಡಿವೆ – ಕೆಲವು ತಕ್ಷಣ, ಕೆಲವು ಕಾಲಕ್ರಮೇಣ. ಟೆಲಿವಿಷನ್ ಮುಖಾಂತರ ಭರತನಾಟ್ಯ ಕಾರ್ಯಕ್ರಮವನ್ನು ಮನೆಯಲ್ಲೇ ಕುಳಿತು ನೋಡಲು ಸಾಧ್ಯವಾದದ್ದು ಪ್ರಗತಿಯ ಒಂದು ಮುಖ. ಚಿಕ್ಕ ಪರದೆಯ ಮೇಲೆ ಮನೆಯ ಸದ್ದುಗದ್ದಲಗಳ ನಡುವೆ ಭರತನಾಟ್ಯ ಕಾರ್ಯಕ್ರಮಗಳನ್ನು ಪದೇ ಪದೇ ನೋಡಿ ನಾಟ್ಯದ ಬಗ್ಗೆ ಸ್ವಲ್ಪ ಉದಾಸೀನ ಭಾವನೆ ತಾಳಿದ್ದೂ ಇನ್ನೊಂದು ಮುಖ. ಭರತನಾಟ್ಯವಷ್ಟೇ ಅಲ್ಲ - ಭಾವಗೀತೆ, ಜಾನಪದ ಗೀತೆ, ನಾಟಕ, ಸಿನೆಮಾ ಇವೆಲ್ಲ ಈಗ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳ ಮುಖಾಂತರ ಮನೆಗೇ ಬಂದು ಬಿಟ್ಟಿರುವುದು ಒಳ್ಳೆಯದಕ್ಕೋ ಅಲ್ಲವೋ ಎಂಬ ಪ್ರಶ್ನೆಗೆ ಒಂದೇ ಉತ್ತರವಿಲ್ಲ.

ಬೆಳದಿಂಗಳೂಟ ಎಂದರೆ ಏನೆಂದೂ ಬೆಂಗಳೂರಿನಲ್ಲಿ ಕಾನ್ವೆಂಟ್ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಗೊತ್ತಿರಲಾರದು. ಟೆಲಿವಿಷನ್ ಇನ್ನೂ ಮನೆಗಳಿಗೆ ಹೀಗೆ ಧಾಳಿಯಿಡುವ ಮುಂಚಿನ ದಿನಗಳಲ್ಲಿ ಸಾಮೂಹಿಕ ಮನರಂಜನೆಗೆಂದು ನಮ್ಮ ವಠಾರದ ಮನೆಯವರು ಸೇರಿ ಬೆಳದಿಂಗಳೂಟದ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಇದು ಇಪ್ಪತ್ತು ವರ್ಷದ ಹಿಂದಿನ ಮಾತು. ವಠಾರದ ಪ್ರತಿಯೊಬ್ಬ ಮನೆಯವರೂ ಏನಾದರೂ ಭಕ್ಷ್ಯ ಮಾಡಿಕೊಂಡು ಬರುತ್ತಿದ್ದರು. ನಗು, ಗದ್ದಲ. ಉಪಚಾರ, ಇವುಗಳ ನಡುವೆ ಎಲ್ಲರೂ ಕುಳಿತು ಊಟ ಮಾಡುತ್ತಿದ್ದೆವು. ಹೆಂಗಸರು, ಮಕ್ಕಳಿಂದ ಹಾಡು ಇತ್ಯಾದಿ ಪ್ರತಿಭಾ ಪ್ರದರ್ಶನ ಕೂಡಾ ನಡೆಯುತ್ತಿತ್ತು. ಹೀಗೇ ಸಾಮೂಹಿಕ ಪಿಕ್‌ನಿಕ್‌ಗೆ ಹೋಗುವ ಕಾರ್ಯಕ್ರಮಗಳೂ ಏರ್ಪಾಟಾಗುತ್ತಿದ್ದವು. ಮನೆಪಾಠ, ಟಿ. ವಿ, ವಿಡಿಯೋಗಳ ನಡುವೆ ಬೆಳೆಯುತ್ತಿರುವ ಇಂದಿನ ಮಕ್ಕಳು ಮನೆಯಿಂದ ಹೊರಗೆ ಕಾಣುವುದೇ ಅಪರೂಪವಾಗಿಬಿಟ್ಟಿದೆ. ಟಿ. ವಿ. ಮೂಲಕವೇ ಜಗತ್ತಿನ ಮೂಲೆ ಮೂಲೆಗಳ ವಿಷಯವನ್ನೆಲ್ಲ ತಿಳಿದುಕೊಂಡು ತೀಕ್ಷ್ಣಮತಿಗಳಾಗುತ್ತಿರುವ ಈ ಪೀಳಿಗೆ ತಮ್ಮ ಸಮೀಪದಲ್ಲಿರುವವರೊಂದಿಗೇ ಹೆಚ್ಚು ಸಂಪರ್ಕಿಸದೆ ಅಂತರ್ಮುಖಿಗಳಾಗುತ್ತಿರುವುದು ಒಂದು ವಿಪರ್ಯಾಸ.

ದೂರಸಂಪರ್ಕ ಮಾಧ್ಯಮಗಳ ಪಟ್ಟಿಗೆ ಇತ್ತೀಚಿಗೆ ಸೇರಿಕೊಂಡದ್ದು ಕಂಪ್ಯೂಟರ್. ನೆಟ್‌ವರ್ಕ್ ಮೂಲಕ ಇಂದು ಜಗತ್ತಿನ ಯಾವುದೇ ಕಂಪ್ಯೂಟರ್ ಮೂಲಕ ಇನ್ನಾವುದೇ ಕಂಪ್ಯೂಟರ್ ಜೊತೆ ಸಂಪರ್ಕ ಸಾಧಿಸುವುದು ಸಾಧ್ಯವಿದೆ. ಟೆಲಿಫೋನ್ ಮೂಲಕ ಕೇವಲ ಮಾತಾಡಬಹುದು ; ಪತ್ರ ಬರೆದಾಗ ಲಿಖಿತ ಸಂದೇಶ ಮಾತ್ರ ಕಳಿಸಲು ಸಾಧ್ಯ : ಫೋಟೋ ಕಳಿಸಿದಾಗ ದೃಶ್ಯ ಮಾಧ್ಯಮದಿಂದ ಮಾತ್ರ ಸಂಪರ್ಕ ಸಾಧ್ಯ. ಕಂಪ್ಯೂಟರ್ ಮೂಲಕ ಸಂಪರ್ಕ ಸಾಧಿಸಿದಾಗ ಈ ಎಲ್ಲಾ ಮಾಧ್ಯಮಗಳನ್ನು - ದೃಶ್ಯ, ವಾಕ್, ಮತ್ತು ಲೇಖನ ಒಂದಾಗಿ ದುಡಿಸಿಕೊಳ್ಳುವುದು ಸಾಧ್ಯ. ಇದನ್ನು ಕಂಪ್ಯೂಟರ್ ಪರಿಭಾಷೆಯಲ್ಲಿ ಮಲ್ಟಿಮೀಡಿಯಾ ಎನ್ನುತ್ತಾರೆ.

ಮಲ್ಟಿಮೀಡಿಯಾ ಇದೀಗ ಹೆಜ್ಜೆಯಿಡಲು ಕಲಿಯುತ್ತಿರುವ ತಂತ್ರಜ್ಞಾನ. ಆದರೆ ಆರಂಭದಲ್ಲೇ ಇದು ಜನರ ಕುತೂಹಲ ಕೆರಳಿಸಿದೆ. ತನ್ನ ಅಪೂರ್ವ ಸಾಧ್ಯತೆಗಳ ಮೂಲಕ ಇದು ಸಂಶೋಧಕರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಸಂಸ್ಕೃತಿಯ ಮೇಲೆ ಮಲ್ಟಿಮೀಡಿಯಾ ಪರಿಣಾಮಗಳೇನು ಎಂಬುದನ್ನು ತಿಳಿಯಲು ಒಂದೆರಡು ಉದಾಹರಣೆ ನೋಡೋಣ.

ಜಾನಪದ ಕ್ಯಾವದ ಬಗ್ಗೆ ಒಂದು ಸಂಶೋಧನಾ ಪ್ರಬಂಧ ಬರೆಯಬೇಕೆಂದು ಕೊಳ್ಳೋಣ. ಲೇಖನದ ಮಧ್ಯೆ ಉದಾಹರಣೆಗೆಂದು ಜಾನಪದ ಹಾಡಿನ ಸಾಲುಗಳನ್ನು ಬರೆಯುವುದಕ್ಕೂ ಅವೇ ಸಾಲುಗಳನ್ನು ಹಾಡಿ ತೋರಿಸುವುದಕ್ಕೂ ಬೇಕಾದಷ್ಟು ವ್ಯತ್ಯಾಸವಿದೆ. ಹಾಗೇ ಶಾಸ್ತ್ರೀಯ ಸಂಗೀತದ ಬಗ್ಗೆ ಬರೆಯಬೇಕಾದಾಗಲೂ ಅಷ್ಟೇ. ಇದೇ ರೀತಿ ಸಂಗೀತವಾದ್ಯವೊಂದನ್ನು ವಿವರಿಸುವಾಗ ಅದರ ಚಿತ್ರವನ್ನು

ಸೂಕ್ತ ಹಾಡಿನ ಧ್ವನಿಮುದ್ರಿಕೆ, ಫೋಟೋಗ್ರಾಫ್ ಇವೆರಡನ್ನೂ ಲೇಖನದ ಮಧ್ಯೆ ಎಲ್ಲಿಬೇಕೋ ಅಲ್ಲಿ ಅಳವಡಿಸುವುದು "ಮಲ್ಟಿಮೀಡಿಯಾ ಡಾಕ್ಯುಮೆಂಟ್" ನಲ್ಲಿ ಸಾಧ್ಯ. ಈಗಾಗಲೇ ಅಮೆರಿಕಾ ಮತ್ತು ಯೂರೋಪ್ ದೇಶಗಳ ಹಲವಾರು ಸಂಶೋಧಕರು ಇಂಥ ಪ್ರಯೋಗಗಳನ್ನು ನಡೆಸಿದ್ದಾರೆ. ನಶಿಸಿಹೋಗುವಂಥ ಶಿಲ್ಪ ತಾಳೆಗರಿ ಗ್ರಂಥಗಳು ಇಂಥ ವಸ್ತುಗಳನ್ನು ಮಲ್ಟಿಮೀಡಿಯಾ ಡಾಕ್ಯುಮೆಂಟ್‌ಗಳನ್ನಾಗಿ ಪರಿವರ್ತಿಸುವ ಮೂಲಕ ಸದಾಕಾಲ ಕಾಪಾಡಬಹುದು.

ತರಗತಿಯಲ್ಲಿ ಕಂಪ್ಯೂಟರ್ ಬಳಕೆಯ ಮೂಲಕ ಸಾಹಿತ್ಯ ಮತ್ತು ಕಲೆಗಳ ಬೋಧನಾಕ್ರಮದಲ್ಲಿ ಕ್ರಾಂತಿಕಾರೀ ಬದಲಾವಣೆಗಳು ಉಂಟಾಗುತ್ತಿವೆ. ಷೇಕ್ಸ್‌ಪಿಯರ್ ಬಗ್ಗೆ ತರಗತಿಯಲ್ಲಿ ಪಾಠ ಮಾಡುವ ಶಿಕ್ಷಕ, ಕವಿಯ ಚಿತ್ರಗಳು, ಅವನ ನಾಟಕಗಳ ಪ್ರಯೋಗಗಳಿಂದ ಆಯ್ದ ವಿಡಿಯೋ ತುಣುಕುಗಳು, ತನ್ನ ಭಾಷಣ ಇವುಗಳನ್ನು ಸಂಯೋಜಿಸಿ ಒಂದು "ಮಲ್ಟಿಮೀಡಿಯಾ ಪ್ರೆಸೆಂಟೇಷನ್" ತಯಾರಿಸಬಹುದು. ತರಗತಿಯಲ್ಲಿ ಪಾಠದ ನಡುವೆ ಇದನ್ನು ಬಳಸುವುದು ಸಾಧ್ಯ. ಕಂಪ್ಯೂಟರ್ ಮುಂದೆ ಕುಳಿತು ಇಂಥ ಪ್ರೆಸೆಂಟೇಷನ್ ತಯಾರಿಸುವುದು ಈಗಾಗಲೇ ಸಾಧ್ಯವಾಗಿರುವ ಸಾಫ್ಟ್‌ವೇರ್ ಕಂಪ್ಯೂಟರ್ ಮಾರುಕಟ್ಟೆಯಲ್ಲಿ ಸುಲಭವಾಗಿ ಲಭ್ಯ ವಾಗುತ್ತವೆ.

ಕಂಪ್ಯೂಟರ್ ನೆಟ್‌ವರ್ಕ್‌ನ ಬಳಕೆದಾರರು ವಿವಿಧ ವಿಷಯಗಳನ್ನು ಚರ್ಚಿಸಲು ಅನೇಕ "ನ್ಯೂಸ್ ಗ್ರೂಪ್"ಗಳನ್ನು ಕಟ್ಟಿಕೊಂಡಿದ್ದಾರೆ. ಉದಾಹರಣೆಗೆ ಭಾರತೀಯ ಸಂಸ್ಕೃತಿಯ ಬಗ್ಗೆ ಚರ್ಚಿಸಲು "Soc culture Indian" ಎಂಬ ನ್ಯೂಸ್‌ಗ್ರೂಪ್ ಇದೆ. ಕಂಪ್ಯೂಟರ್ ನೆಟ್‌ವರ್ಕ್‌ನ ಬಳಕೆದಾರರು ಸುದ್ದಿ ಅಥವಾ ಲೇಖನಗಳನ್ನು ಎಲೆಕ್ಟ್ರಾನಿಕ್ ಮೇಲ್" (Electronic mail) ಎಂಬ ವ್ಯವಸ್ಥೆಯ ಮೂಲಕ ಇನ್ನಿತರ ಬಳಕೆದಾರರೊಂದಿಗೆ ಹಂಚಿಕೊಳ್ಳಬಹುದು. ಉದಾಹರಣೆಗೆ ನಾನು ಕನ್ನಡ ಕಾವ್ಯದ ಬಗ್ಗೆ ಒಂದು ಲೇಖನವನ್ನು ಸಿದ್ಧಪಡಿಸಿ ಅದನ್ನು ನೆಟ್‌ವರ್ಕ್ ಮೂಲಕ ಇಂಡಿಯನ್ ನ್ಯೂಸ್‌ಗ್ರೂಪ್‌ಗೆ ಬಿತ್ತರಿಸಿದರೆ ಅದು ಜಗತ್ತಿನ ಸಹಸ್ರಾರು ಜನರನ್ನು ಕೆಲವೇ ಗಂಟೆಗಳ ಕಾಲದಲ್ಲಿ ತಲುಪುತ್ತದೆ. ಇಂಥ ನ್ಯೂಸ್‌ಗ್ರೂಪ್‌ಗಳ ಮೂಲಕ ಕಾವ್ಯ, ನಾಟಕ, ಸಿನಿಮಾ, ಚಿತ್ರಕಲೆ ಮುಂತಾದ ವಿಷಯಗಳ ಬಗ್ಗೆ ಸಮಾನ ಆಸಕ್ತಿ ಯುಳ್ಳ ನೂರಾರು ಮಂದಿ ಚರ್ಚೆ ನಡೆಸುತ್ತಾರೆ. ಮುದ್ರಿತ ಪತ್ರಿಕೆಗೂ ಈ ಎಲೆಕ್ಟ್ರಾನಿಕ್ ಪತ್ರಿಕೆಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಈ ಪತ್ರಿಕೆಯ ಓದುಗರು ತಕ್ಷಣ ತಮ್ಮ ಪ್ರತಿಕ್ರಿಯೆಯನ್ನು ಎಲ್ಲರಿಗೂ ಬರೆದು ತಿಳಿಸಬಹುದು. ಉದಾಹರಣೆಗೆ ನಾನು ಲಂಕೇಶ್ ಅವರ ಕತೆಯೊಂದರ ಅನುವಾದವನ್ನು ಬಿತ್ತರಿಸಿದರೆ ಅದನ್ನು ಮೆಚ್ಚಿ ಅಥವಾ ವಿಮರ್ಶಿಸಿ ಅಥವಾ ಆ ಕತೆಗೆ ಸಂಬಂಧಿಸಿದ ಇನ್ನಾವುದೇ ಚರ್ಚಾರ್ಹ ಸಂಗತಿಗಳನ್ನು ಉಲ್ಲೇಖಿಸಿ ನ್ಯೂಸ್‌ಗ್ರೂಪ್ ಓದುಗರು ನನಗೆ ಪತ್ರ ಬರೆಯಬಹುದು ನಾನು ಲೇಖನವನ್ನು ಬಿತ್ತರಿಸಿದ ಕೆಲವೇ ನಿಮಿಷಗಳಲ್ಲಿ ನನಗೆ ಪ್ರತಿಕ್ರಿಯೆ ದೊರೆತ

ಉದಾಹರಣೆಗಳೂ ಇವೆ. ಇಂಥ ಶೀಘ್ರ ಪ್ರತಿಕ್ರಿಯೆಯ ಮೂಲಕ ಉತ್ತಮ ಸಾಹಿತ್ಯಕ ಚರ್ಚೆಗೆ ಅನುಕೂಲವಾಗುತ್ತದೆ- ಸಾಮೂಹಿಕ ಸಂಶೋಧನೆಗೆ ಮಾರ್ಗವಾಗುತ್ತದೆ. "ನೆಟ್‌ವೇರ್" (Netware) ಎಂಬ ಹೊಸ ಶಬ್ದವನ್ನು ಇಂಥ ಸಂದರ್ಭವನ್ನು ವಿವರಿಸಲು ಬಳಸಲಾಗುತ್ತಿದೆ.

ನೆಟ್‌ವರ್ಕ್ "ಇಹದ ಸಹವಾಸ"ವನ್ನು ನಮಗೆ ಕುಳಿತಲ್ಲಿಂದಲೇ ಒದಗಿಬಲ್ಲ ಶಕ್ತಿಶಾಲೀ ಮಾಧ್ಯಮ. ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ನ್ಯೂಸ್ ಗ್ರೂಪ್‌ಗಳಲ್ಲಿ ಚರ್ಚೆ ಕೆಲವೊಮ್ಮೆ ಅಡ್ಡ ಹಾದಿ ಹಿಡಿಯುವುದೂ ಉಂಟು. ಪರಸ್ಪರ ದೋಷಾರೋಪಣೆ, ಕೀಳುಮಟ್ಟದ ಹಾಸ್ಯ, ಹಿತಾಸಕ್ತ ಜನರಿಂದ ಹುಟ್ಟಿಕೊಳ್ಳುವ ಘೋಷಣಾತ್ಮಕ ಬರಹಗಳು, ಪರಧರ್ಮವನ್ನು ದೂಷಿಸಿ ಬರೆದ ಅನಾಮಧೇಯ ಲೇಖನಗಳು, ಇಂಥ ಕಲ್ಮಶವೂ ನ್ಯೂಸ್ ಗ್ರೂಪ್‌ನಲ್ಲಿ ತೇಲಿ ಬರುತ್ತದೆ. ಆಗ "ವಿಪರೀತವಾಯ್ತು ನಮಗೆ ಇಹದ ಸಹವಾಸ" ಎನ್ನಿಸುವುದೂ ಉಂಟು.

ತಂತ್ರಜ್ಞಾನದ ಪ್ರಗತಿಯೊಂದಿಗೆ ಸಂಸ್ಕೃತಿಯ ಬೆಳವಣಿಗೆಗೂ ನಾನಾ ಮಾರ್ಗಗಳು ತೆರೆದುಕೊಳ್ಳುತ್ತಿವೆ. ಇವುಗಳಲ್ಲಿ ಯಾವ ದಾರಿಗಳು ಭರವಸೆಯನ್ನು ಉಳಿಸಿಕೊಳ್ಳುತ್ತವೆಯೋ ಕಾಲವೇ ಉತ್ತರ ಹೇಳುತ್ತದೆ. ಪುಸ್ತಕ ಮುದ್ರಣದಲ್ಲಿ ಕ್ರಾಂತಿಕಾರೀ ಬದಲಾವಣೆಗಳು ಕಳೆದ ದಶಕದಲ್ಲಿ ಉಂಟಾದವು. ಇದಕ್ಕೆ ಮುಖ್ಯ ಕಾರಣವೆಂದರೆ ಪ್ರಿಂಟಿಂಗ್ ತಂತ್ರಜ್ಞಾನದಲ್ಲಿ ಉಂಟಾದ ಸುಧಾರಣೆ. ಲೇಸರ್ ಪ್ರಿಂಟರ್ ಎಂಬ ಹೊಸ ಮಾದರಿಯ ಪ್ರಿಂಟರ್ ಈಗ ಸರ್ವೇ ಸಾಧಾರಣವಾಗಿ ಬಳಸಲಾಗುತ್ತಿದೆ. ಈ ಪ್ರಿಂಟರ್ ಗದ್ದಲ ರಹಿತ ಹಾಗೂ ವೇಗ ಪೂರ್ಣ. ಇದಕ್ಕೆ ಹಿಂದಿದ್ದ ಡೇಸಿವ್ಹೀಲ್ ಪ್ರಿಂಟರ್ ಒಂದೊಂದೇ ಸಾಲನ್ನು ಮುದ್ರಿಸುವುದಾದರೆ ಲೇಸರ್ ಪ್ರಿಂಟರ್ ಇಡೀ ಪುಟವನ್ನು ಒಂದೇ ಬಾರಿಗೆ ಮುದ್ರಿಸುತ್ತದೆ. ಲೇಸರ್ ಪ್ರಿಂಟರ್‌ನ ಮುದ್ರಣವೂ ಸುಂದರ. ಲಿಖಿತ ಸಾಮಗ್ರಿಯಲ್ಲದೆ ರೇಖಾ ಚಿತ್ರಗಳು ಮತ್ತು ಛಾಯಾಚಿತ್ರಗಳನ್ನೂ ಲೇಸರ್ ಪ್ರಿಂಟರ್ ಮೂಲಕ ಮುದ್ರಿಸಬಹುದು. ಇದರಿಂದಾಗಿ ಪುಸ್ತಕದ ಮುದ್ರಣಕಾರ್ಯ ಮನೆಯಲ್ಲಿ ಕುಳಿತೇ ಮಾಡಬಹುದಾದ ಸಾಮರ್ಥ್ಯ ಇಂದು ನಮಗಿದೆ.

"ಡೆಸ್ಕ್ ಟಾಪ್ ಪಬ್ಲಿಷಿಂಗ್" (Desk Top Publishing ಅಥವಾ DTP) ಇಂದು ಆಗಾಗ ಕೇಳಿಬರುವ ಹೆಸರು. DTP ಇಂದು ಪುಸ್ತಕ ಮುದ್ರಣದ ದಿಕ್ಕನ್ನೇ ಬದಲಾಯಿಸಿದೆ. ಹಿಂದೆ ಲೇಖಕ ಬರೆದಿದ್ದನ್ನು ಯಾರೋ ಬೆರಳಚ್ಚುಗಾರನು ಜೋಡಿಸಿದ ಅಚ್ಚುಗಳ ಮೂಲಕ ಮುದ್ರಿಸಲಾಗುತ್ತಿತ್ತು. ಕೊನೆಗೊಮ್ಮೆ ಲೇಖಕನಿಗೆ ಪ್ರೂಫ್ ತಿದ್ದುವ ಅವಕಾಶ ದೊರೆತರೂ ಲೇಖಕನಿಗೆ ಮುದ್ರಣ ಕಾರ್ಯದಿಂದ ಪೂರ್ಣ ತೃಪ್ತಿಯಾಗದು.

ಮುದ್ರಣದ ಮೇಲೆ ನನಗೇ ಇನ್ನಷ್ಟು ಹತೋಟಿ ಇದ್ದಿದ್ದರೆ ! ಎಂದು ಲೇಖಕ ಕೈ ಹಿಸುಕಿಕೊಳ್ಳುವಂಥ ಪರಿಸ್ಥಿತಿ ಇತ್ತು. ಇಂದು ಕಂಪ್ಯೂಟರ್ ಮುಂದೆ ಕುಳಿತು

ತನ್ನ ಲೇಖನವನ್ನು ತಾನೇ ಟೈಪ್ ಸೆಟ್ ಮಾಡುವ ಲೇಖಕ ಇಂಥ ಕಿರಿಕಿರಿಯಿಂದ ಮುಕ್ತನಾಗಿದ್ದಾನೆ. ಎಲ್ಲಿ ದೊಡ್ಡ ಅಕ್ಷರಗಳನ್ನು ಬಳಸಬೇಕು, ಎಲ್ಲಿ ಪದಗಳನ್ನು ಗಾಢಾಕ್ಷರಗಳಲ್ಲಿ ಮುದ್ರಿಸಬೇಕು, ಲೇಖನದ ರೂಪರೇಷೆ (Layout) ಹೇಗಿರಬೇಕು ಇದನ್ನೆಲ್ಲವನ್ನೂ ಲೇಖಕನೇ ನಿರ್ಧರಿಸಬಲ್ಲ. ಇಂದು ತಾಂತ್ರಿಕ ಲೇಖನಗಳನ್ನು ಬರೆದ ಲೇಖಕನೇ ಅಚ್ಚು ಜೋಡಿಸಿ "ಫ್ಲಾಪಿ" ಮೂಲಕ ಪ್ರಕಾಶಕನಿಗೆ ತಲುಪಿಸುವ ಪರಿಪಾಠ ಆರಂಭವಾಗಿದೆ.

ಕಾಗದದ ಉಳಿತಾಯವೂ DTPಯ ವರದಾನಗಳಲ್ಲಿ ಒಂದು. ತನ್ನ ಲೇಖನವು ಹೇಗೆ ಮೂಡಿಬರುತ್ತದೆ ಎಂಬುದನ್ನು ಕಂಪ್ಯೂಟರ್ ಪರದೆಯ ಮೇಲೆ ಲೇಖಕ ಓದಿಕೊಂಡು ತಿದ್ದುಪಡಿಗಳನ್ನು ಮುದ್ರಿಸುವ ಮುನ್ನವೇ ಮಾಡಬಹುದು. ಕಂಪ್ಯೂಟರ್ ತೆರೆಯ ಮೇಲೇ ಲೇಖನಗಳನ್ನು ಓದುವ ಪರಿಪಾಠ ಈನಡುವೆ ಹೆಚ್ಚುತ್ತಿರುವುದರಿಂದ ಕ್ರಮೇಣ ಮುದ್ರಿತ ಸಾಮಗ್ರಿ ಕಡಿಮೆಯಾಗಿ ಕಾಗದದ ಬಳಕೆಯೂ ಕಡಿಮೆಯಾಗಬಹುದೆಂದು ಕೆಲವು ವಿಜ್ಞಾನಿಗಳ ಊಹೆ.

"ಕಂಪ್ಯೂಟರ್ ಗ್ರಾಫಿಕ್ಸ್" ಇಂದು ಸರ್ವೇಸಾಮಾನ್ಯವಾಗಿ ಕೇಳಿಬರುವ ಪದ. ಕಂಪ್ಯೂಟರ್ ತೆರೆಯ ಮೇಲೆ ಚಿತ್ರಗಳನ್ನು ಬಿಡಿಸುವ ತಂತ್ರಜ್ಞಾನಕ್ಕೆ ಗ್ರಾಫಿಕ್ಸ್ ಎಂದು ಹೆಸರಿದೆ. ಕಳೆದ ಮೂರುದಶಕಗಳಲ್ಲಿ ಈ ತಂತ್ರಜ್ಞಾನ ಹೊಸ ಹೊಸ ದಾಖಲೆಗಳನ್ನು ಸಾಧಿಸಿವೆ. ಒಂದು ಚಿತ್ರವನ್ನು ಕಂಪ್ಯೂಟರ್ ತೆರೆಯ ಮೇಲೆ ಬಿಡಿಸಿದರೆ ಆ ಚಿತ್ರಕ್ಕೆ ಮಾರ್ಪಾಡುಗಳನ್ನು ಮಾಡುವುದು ತುಂಬಾ ಸುಲಭ. ಉದಾಹರಣೆಗೆ ಚಿತ್ರಕ್ಕೆ ಬೇರೆ ಬಣ್ಣ ತುಂಬುವುದು, ಚಿತ್ರವನ್ನು ಗಾತ್ರದಲ್ಲಿ ಹಿಗ್ಗಿಸುವುದು / ಕುಗ್ಗಿಸುವುದು, ಎರಡು ಬೇರೆ ಬೇರೆ ಚಿತ್ರಗಳನ್ನು ಜೋಡಿಸಿ ಇನ್ನೊಂದು ಚಿತ್ರವನ್ನು ತಯಾರಿಸುವುದು, ಇಂಥ ಚಕಮಕಿಗಳನ್ನು ಕಂಪ್ಯೂಟರ್ ಕ್ಷಣಾರ್ಧದಲ್ಲಿ ಮಾಡಬಲ್ಲದು. ಇದರಿಂದ "ಕಂಪ್ಯೂಟರ್ ಅನಿಮೇಷನ್" ಗೆ ಒಂದು ಹೊಸ ಆಯಾಮ ಬಂದಂತಾಗಿದೆ. ಒಂದು ಚಿತ್ರವನ್ನು ಬರೆದು ಅದನ್ನು ಸ್ವಲ್ಪ ಬದಲಾಯಿಸಿ ಇನ್ನೊಂದು ಚಿತ್ರ ತಯಾರಿಸುವುದು ಸುಲಭವಾದಾಗ ಇಂಥ ಚಿತ್ರಗಳ ಸರಮಾಲೆಯೊಂದನ್ನು ನಿರ್ಮಿಸುವುದೂ ಕಷ್ಟವಲ್ಲ. ಹೀಗಾಗಿ ಕಂಪ್ಯೂಟರ್ ಬಳಸಿ ಇಡೀ ಗಂಟೆಯೊಂದರ ಅವಧಿಯ ಚಲನಚಿತ್ರವನ್ನು ತಯಾರಿಸುವುದೂ ಇಂದು ಸಾಧ್ಯವಾಗಿದೆ. ಹಾಲೀವುಡ್‌ನಲ್ಲಿ ಈಗಾಗಲೇ ಇಂಥ ಪ್ರಯತ್ನಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ವಿಡಿಯೋ ಎಡಿಟಿಂಗ್ ಮತ್ತು ಆಡಿಯೋ ಎಡಿಟಿಂಗ್ ಎರಡೂ ಇಂದು ಕಂಪ್ಯೂಟರ್ ಬಳಕೆಯ ಮೂಲಕ ಸುಲಭವಾಗಿದೆ. ಒಂದು ಧ್ವನಿಮುದ್ರಿಕೆಯನ್ನು ಟೇಪ್ ಬದಲು ಕಂಪ್ಯೂಟರ್‌ನ ನೆನಪಿನಲ್ಲಿ (Hard Disk) ಸಂಗ್ರಹಿಸಿಡುವುದು ಸಾಧ್ಯ. ಇದರ ಲಾಭ : ಧ್ವನಿಮುದ್ರಿಕೆಯ ಯಾವುದೇ ಭಾಗವನ್ನು ಅಷ್ಟೇ ಸುಲಭವಾಗಿ ಪ್ಲೇ ಮಾಡಲು ಸಾಧ್ಯ. ಹೀಗಾಗಿ ಹಲವಾರು ಧ್ವನಿಮುದ್ರಿಕೆಗಳ ಕ್ಲಿಪಿಂಗ್‌ಗಳನ್ನು ಸಂಗ್ರಹಿಸಿಟ್ಟುಕೊಂಡು ಅವುಗಳನ್ನು ಕತ್ತರಿಸಿ ಜೋಡಿಸಿ ಹೊಸದೊಂದು ಧ್ವನಿಮುದ್ರಿಕೆ

ಯನ್ನು ತಯಾರಿಸುವುದು ಇಂದು ಸಲಭ. ಅದೇ ರೀತಿ ವಿಡಿಯೋ ಕ್ಲಿಪಿಂಗ್‌ಗಳ ಸಂಪಾದನ ಕಾರ್ಯವೂ ಸುಲಭ. ಟೇಪ್‌ನಲ್ಲಿ ಸಂಗ್ರಹವಾಗುವ ಆಡಿಯೋ ಅಥವಾ ವಿಡಿಯೋ ಸಾಮುಗ್ರಿಯನ್ನು ಕಂಪ್ಯೂಟರ್‌ನ ನೆನಪಿನಲ್ಲಿ ಶೇಖರಿಸಿಟ್ಟಾಗ ಬೇಕಾಗುವ ನೆನಪಿನಲ್ಲಿ ಶಕ್ತಿ ಅಗಾಧ. ಇದಕ್ಕಾಗಿ ಹಲವಾರು ಪರಿಹಾರಗಳನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. "ಕಂಪ್ರೆಷನ್" ಒಂದು ಉಪಾಯ – ಒಂದು ಕಪ್ಯೂಟರ್ ಫೈಲನ್ನು ಕುಗ್ಗಿಸಿದರೂ ಆ ಫೈಲಿನ ವಸ್ತುವಿಗೆ ಏನೂ ಹಾನಿಯಾದಂತೆ ಮಾರ್ಪಡಿಸುವ ವಿಧಾನಕ್ಕೆ ಕಂಪ್ರೆಷನ್ (Compression) ಎನ್ನುತ್ತಾರೆ. ಇದಕ್ಕೆ ವಿರುದ್ಧವಾಗಿ ಆಗಾಧ ನೆನಪಿನ ಶಕ್ತಿಗಳನ್ನು ಹೊಂದಿದ Optical Disk ನಂಥ ಹೊಸ ತಂತ್ರ ಜ್ಞಾನವನ್ನೂ ಕಂಪ್ಯೂಟರ್ ವಿಜ್ಞಾನಿಗಳು ಹುಡುಕಿದ್ದಾರೆ.

ಪರಿಶಿಷ್ಟ

ವಿಪರೀತವಾಯ್ತು ನಮಗೆ ಇಹದ ಸಹವಾಸ

(ಮೂಲ ಕವಿತೆ : 'The world is too Much with us'
ಕವಿ : ವಿಲಿಯಂ ವರ್ಡ್ಸ್‌ವರ್ತ್)
ಕನ್ನಡ ಅನುವಾದ : ಪಿ. ಪಿ. ರವಿಕುಮಾರ್

ವಿಪರೀತವಾಯ್ತು ನಮಗೆ ಇಹದ ಸಹವಾಸ; ದಿನ ಬೆಳಗಾಗ
ಕೊಡುವಕೊಳ್ಳುವ ಹಾಳು ವ್ಯಾಪಾರದಲ್ಲೇ ನಮ್ಮೆಲ್ಲ ಶಕ್ತಿ ವ್ಯರ್ಥಃ
ಪ್ರಕೃತಿಯಲ್ಲಿ ಇಣುಕಿದರೂ ಕಾಣದಲ್ಲ ನಮ್ಮ ಮುಖ!
ಹೃದಯವೋ! ಕೊಟ್ಟುಬಿಟ್ಟಿದ್ದೇವೆ ದುರ್ದಾನ!
ಚಂದ್ರನಾಗಮನಕ್ಕೆ ಎದೆಯುಬ್ಬಿಸುವ ಕಡಲು,
ಹೇಳಲೇನನ್ನೊಹಾತೊರೆದು ಹಗಲೆಲ್ಲ ಹೂಯಿಲಿಟ್ಟು
ಹೈರಾಣಾಗಿ ಸೇರಿಕೊಂಡಿದೆ ಗಾಳಿ ಹೂಬನ ಮಡಿಲು.
ಇದಾವುದಕ್ಕೂ ಕರಗದಲ್ಲ ನಮ್ಮೆದೆ,
ಗುರುತಿಸದಲ್ಲ ಸುಪ್ತ ತಾಳರಾಗಗಳು!
ಈ ಭಾಗ್ಯಕ್ಕಿಂತಲೂ ನಿರಕ್ಷರ ಕುಕ್ಷಿಯಾಗಿ
ಹುಟ್ಟಿದ್ದರೆಲ್ಲೋ ಹಳ್ಳಿಗಾಡಿನಲಿ – ಅಸಂಸ್ಕೃತ, ಕ್ಷುದ್ರ–
ಹುಲ್ಲುಗಾವಲಿನ ಈ ವಿಸ್ತಾರದಂಚಿನಲ್ಲಿ
ನಿಂತು ಕನಸುತ್ತಿದ್ದೆನೆಂಥ ಮಧುರ ಚಿತ್ರ!
ಕಡಲಾಳದಿಂದ ಕೆನೆದು ಬರುವ ರವಿ ಸಪ್ತಾಶ್ವ,
ಮದನ ಹೂಬಿಲ್ ಹೆದೆಯೇರಿಸುವ ದೃಶ್ಯ!

(ಕೃಪೆ : ಪ್ರತಿಭಾ ಯುವ ವೇದಿಕೆ ಬೆಂಗಳೂರು)

ನಮ್ಮ ಸಾಹಿತ್ಯ ಪತ್ರಿಕೆಗಳು

ಡಿ. ವಿ. ಪ್ರಹ್ಲಾದ್

ಇವತ್ತಿನ ಸೃಜನಶೀಲ ಪ್ರಕಾರಗಳು ಒಂದು ಸಂದಿಗ್ಧವನ್ನು ಎದುರಿಸಲು ಆರಂಭಿಸಿದೆ, ಮಾರುಕಟ್ಟೆ ಶಕ್ತಿಗಳ ಎದುರು ಅವುಗಳು ತಮ್ಮನ್ನ ತಾವು ಉಳಿಸಿಕೊಳ್ಳುವ ಸಮರ್ಥಿಸಿಕೊಳ್ಳುವ ಸಂದಿಗ್ಧತೆ. ಸಾಹಿತ್ಯ ಪತ್ರಿಕೆಗಳೂ ಕೂಡಾ ಈ ರೀತಿಯ ಸಂದಿಗ್ಧತೆಯನ್ನು ಎದುರಿಸುತ್ತಿದೆ, ಅದು ತನ್ನನ್ನ ತಾನು ಉಳಿಸಿಕೊಳ್ಳುವ ಸಂದಿಗ್ಧತೆ.

ಜನಪ್ರಿಯ ಪತ್ರಿಕೆಗಳಿಗಿಂತಾ ವಿರುದ್ಧ ನೆಲೆಯಲ್ಲಿ ಕೆಲಸ ಮಾಡುವ ಸಾಹಿತ್ಯ ಪತ್ರಿಕೆಗಳು, ಸಾವಧಾನದ ಓದುಗರನ್ನ ಗಂಭೀರವಾದ ಚರ್ಚೆಗಳನ್ನ ರೂಪಿಸುತ್ತಿರುತ್ತದೆ. ಜನಪ್ರಿಯ ಪತ್ರಿಕೆಯು ಒಂದು ಉದ್ಯಮವಾದರೆ ಸಾಹಿತ್ಯ ಪತ್ರಿಕೆಗಳು ಪರಿಷತ್ತು, ವಿ. ವಿಗಳಂಥಾ ಕೆಲವು ಸಂಸ್ಥೆಗಳ ಯಾಂತ್ರಿಕ ಪ್ರಕಟಣೆಯನ್ನು ಹೊರತುಪಡಿಸಿ, ಕೆಲವರ ಜೊತೆಗೆ ಅನೇಕರ ಒಳಗಿನ ಒತ್ತಡಗಳಿಗೆ ರೂಪುಕೊಡುವ, ಖುಷಿ ತುಂಬಿಕೊಳ್ಳುವ ಹವ್ಯಾಸವಾಗಿ ರೂಪುಗೊಂಡಿದೆ. ಈ ಖುಷಿಯ ಹಿಂದಿನ ವಾಸ್ತವ ಬಲು ಕಟುವಾದದ್ದೇ. ಸಹಜವಾಗೇ ಸಾಹಿತ್ಯ ಪತ್ರಿಕೆಗಳ ಓದುಗರ ವಲಯ ಕಡಿಮೆಯೇ. ನಮ್ಮ ಕವಿಗಳೊಬ್ಬರು ಹೇಳುವ ಹಾಗೆ ನಮ್ಮ ಓದುಗರ ವಲಯ ಬರಹಗಾರರ ವಲಯವೂ ಹೌದು, ನಮ್ಮಲ್ಲಿನ ಓದುಗರ ಮತ್ತು ಬರಹಗಾರರ ಸಂಖ್ಯೆ ಒಂದೇ ಆಗಿದೆ. ಬಹುಪಾಲು ಇವರು ಬರೆದದ್ದು ಅವರು, ಅವರು ಬರೆದದ್ದು ಇವರು ಓದುವ ದರಿದ್ರ ಸ್ಥಿತಿ ! ಆದರೆ ನಮ್ಮ ಸಾಹಿತ್ಯದ ವಿವಿಧ ಸಂದರ್ಭಗಳಲ್ಲಿ ಲೇಖಕರ ಕಾಲಮಾನಗಳಲ್ಲಿಈ ಪತ್ರಿಕೆಗಳ ಪಾತ್ರ ಬಹಳ ಹಿರಿದಾದದ್ದು ಪ್ರಬುದ್ಧಕರ್ನಾಟಕ, ಸಾಕ್ಷಿ, ಸಂಕ್ರಮಣ, ರುಜುವಾತು, ಶೂದ್ರ ಇತ್ಯಾದಿ ಪತ್ರಿಕೆಗಳು ಅನೇಕ ಲೇಖಕರನ್ನು ರೂಪಿಸುವಲ್ಲಿ ಆಯಾ ಕಾಲದ ಸಾಹಿತ್ಯದ ಚರ್ಚೆಗಳಿಗೆ ಮುಖ್ಯ ನೆಲೆಯಾಗಿ ಕೆಲಸ ಮಾಡಿವೆ.

ಇವತ್ತಿನ ಸಾಹಿತ್ಯ ಪತ್ರಿಕೆಗಳ ಎದುರು ಮತ್ತೊಂದು ಮುಖ್ಯ ಪ್ರಶ್ನೆ ಏಳುತ್ತಿದೆ. ಈ ಪತ್ರಿಕೆಗಳು ಬರೀ ಸಾಹಿತ್ಯದ ಅಕೆಡೆಮಿಕ್ ಚರ್ಚೆಗಳಿಗಷ್ಟೇ ಮೀಸಲಾಗಿರಬೇಕೆ ? ಎನ್ನುವುದು. ನಮ್ಮಗಳ ಬದುಕಿನ ಹಾಗೆ ಸಾಹಿತ್ಯವೂ ಅನೇಕ ವಿಷಯಗಳಿಗೆ ತಾನು ತೆರೆದುಕೊಂಡಿದೆ, ತಿಳಿವಿನ ಇತರ ಶಾಖೆಗಳು ತಮ್ಮ ಕೊಡುಕೊಳ್ಳುವಿಕೆಯನ್ನು ನಿರಂತರವಾಗಿಸಿದೆ. ಜಗತ್ತಿನ ಅನೇಕ ಒತ್ತಡಗಳು ಸಮಸ್ಯೆಗಳು ನಮ್ಮ ಬದುಕಿಗೆ ನೇರ ಸಂಬಂಧಿಯಾಗಿರುವ ಈ ಸನ್ನಿವೇಶದಲ್ಲಿ ಸಾಹಿತ್ಯ ಬದುಕು ಪರಿಸರ

ರಾಜಕೀಯಗಳು ಬೇರೆ ಬೇರೆ Compartment ಗಳಲ್ಲ ಈ ಕಾರಣಕ್ಕೆ ಸಂಚಯ ಒಂದು ಅಕಡೆಮಿಕ್ ಪತ್ರಿಕೆಯಾಗಬಯಸುವುದಿಲ್ಲ. ಜೊತೆಗೆ ನಮ್ಮಲ್ಲಿ ಯಾರಿಗೂ ಈ ರೀತಿಯ ಅಕೆಡೆಮಿಕ್ ಹಿನ್ನೆಲೆಗಳಿಲ್ಲ ನಮ್ಮ ಬುದ್ಧಿವಂತರ ಬೌದ್ಧಿಕ ಸರ್ಕಸ್ಸುಗಳ ನಿರರ್ಥಕತೆ ಮತ್ತು ವಾದಗಳಾಗಲೀ ಇಸಂಗಳಾಗಲೀ ನಮ್ಮ ಬದುಕನ್ನ ಸಂಪೂರ್ಣ ಹಬ್ಬಿಕೊಳ್ಳಲಾಗದ ವಾಸ್ತವ ನಮ್ಮ ಎದುರಿಗಿದೆ.

ಸಂಸ್ಥೆಗಳನ್ನು ಹೊರತುಪಡಿಸಿ ನಮ್ಮ ಬಹುಪಾಲು ಸಾಹಿತ್ಯ ಪತ್ರಿಕೆಗಳು ಏಕ ವ್ಯಕ್ತಿ ಪ್ರದರ್ಶನಗಳೇ ಆಗಿವೆ. ಸಾಹಿತಿಗಳ ಗುಂಪೊಂದು ಪತ್ರಿಕೆ ನಡೆಸುವುದು ಅನೇಕ ಸಲ ಕಪ್ಪೆಗಳನ್ನ ತೂಗಿದ ಹಾಗೆ. (ಇದಕ್ಕೆ ಅಪವಾದಗಳೂ ಇರಬಹುದು) ಪತ್ರಿಕೆಗಳ ನಿರಂತರತೆಯ ದೃಷ್ಟಿಯಿಂದ ವ್ಯಕ್ತಿಯೊಬ್ಬರ ಪ್ರೀತಿ ಹಾಗೂ ಶ್ರದ್ಧೆಗಳೇ ಬಂಡವಾಳ ವಾಗುತ್ತಿವೆ. ಆದರೆ ಈ ರೀತಿಯ ಏಕವ್ಯಕ್ತಿ ಪ್ರದರ್ಶನದಲ್ಲಿ ಒಂದು ಅಪಾಯವು ಇದೆ, ವ್ಯಕ್ತಿಯೊಬ್ಬನ ಮಿತಿಗಳೇ ಪತ್ರಿಕೆಯದ್ದೂ ಆಗುವುದು: ಅದಕ್ಕೇ ನಮ್ಮಲ್ಲಿ ವೈಯುಕ್ತಿಕ ದ್ವೇಷಗಳು ಸಣ್ಣತನಗಳು ಅಂತರಂಗ ಬಹಿರಂಗ ಪತ್ರ ಬರಹಗಳ ಮೂಲಕ ಮಹತ್ವದ ಸಾಂಸ್ಕೃತಿಕ ಚರ್ಚೆ ಎನ್ನುವ ಭ್ರಮೆ ಹುಟ್ಟಿಸುತ್ತಿವೆ. ಯಾವತ್ತೂ ವ್ಯಕ್ತಿಯೊಬ್ಬನ ತೆವಲುಗಳು ಸಣ್ಣತನಗಳು ಹಾಗೂ ಜಗಳಗಳು ಸಮುದಾಯ ಒಂದರ ಧ್ವನಿಯಾಗಲಾರದು, ವ್ಯಕ್ತಿಯೊಬ್ಬನ ಖಾಸಗಿ ಬದುಕಿನ ವಿವರ ಗಳು ಕೆಲವುಮಟ್ಟಿಗೆ ಆಸಕ್ತಿ ಮತ್ತು ಕುತೂಹಲ ಕೆರಳಿಸಿದರೂ ಅಪಾಯಕಾರಿ ಯಾದದ್ದೇ. ಇಂಥವು ಕೂಡಾ ಜನಪ್ರಿಯ ಪತ್ರಿಕೆಗಳ ಹಾಗೆ ಸಾಹಿತ್ಯ ಪತ್ರಿಕೆಗಳ ಮಾರ್ಕೆಟಿಂಗ್ ತಂತ್ರ, ಹೀಗೆ ಮಾಡುವುದರ ಮೂಲಕ ಓದುಗರ ಸೌಜನ್ಯದ ದುರ್ಬಳಕೆಯಾಗುತ್ತಿದೆ. ಈ ಹಿಂದೆ ನಮ್ಮಲ್ಲಿ ನಡೆದ ಅನೇಕ ಅರ್ಥಪೂರ್ಣ ಪತ್ರಿಕೆ ಗಳ ಇತಿಹಾಸದತ್ತ ಮತ್ತೊಮ್ಮೆ ನಾವುಗಳು ಕಣ್ಣು ಹಾಯಿಸಬೇಕಿದೆ.

ನಮ್ಮಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗುತ್ತಿದ್ದರೂ ಸಾಹಿತ್ಯದ ಆಸಕ್ತರ ಓದುಗರ ಸಂಖ್ಯೆ ಬೆಳೆಯುತ್ತಿದ್ದರೂ, ಕೊಂಡುಓದುವ ಅಥವಾ ಗಂಭೀರ ಓದಿನ ಪತ್ರಿಕೆಗಳಿಗೆ ತೊಡಗಿಸಿಕೊಳ್ಳುವ ಅದನ್ನ ತಮ್ಮದಾಗಿಸಿಕೊಳ್ಳುವ ಮನೋಭಾವ ಬಹಳ ಕಡಿಮೆ. ವರ್ಷಗಳಾದರೂ ಚಂದಾ ಕೊಡದ ಎದುರು ಸಿಕ್ಕಾಗ ಉಚಿತ ಸಲಹೆ ಕೊಡುವವರಿಗೆ ನಮ್ಮಲ್ಲಿ ಕೊರತೆಯಿಲ್ಲ, ಪತ್ರಿಕೆಗಳು ತಡವಾದರೂ ಸರಿ ಬಾರದಿದ್ದರೂ ಸರಿ ಅದು ಸತ್ತಿದೆಯೆ ಅಥವಾ ಬದುಕಿದೆಯೆ ಎಂದೂ ಕೇಳಲಾರದ ಜಡತೆ ಕೆಲವರದ್ದು. ಜೊತೆಗೆ ನಮ್ಮ ಸಾಹಿತ್ಯ ಪತ್ರಿಕೆಗಳೂ ಕೂಡಾ ಓದುಗರ ಮನಸ್ಸನ್ನ ಗೆಲ್ಲುವಲ್ಲಿ ವಿಫಲವಾಗಿದೆ. ಅಲ್ಪಾಯುಷಿ ಪತ್ರಿಕೆಗಳು. ಅನಿಯಮಿತ ಪತ್ರಿಕೆಗಳು ಜೊತೆಗೆ ಈ ಹಿಂದಿನಿಂದಲೂ ಸಂಪಾದಕರ ಬೇಜವಾಬ್ದಾರಿ ಹಾಗೂ ಸೋಮಾರಿತನ ದಿಂದ ಮನಸ್ಸಿಗೆ ಬಂದ ಹಾಗೆ ಹೊರಬಂದಿರುವ ಪತ್ರಿಕೆಗಳು ಯಾರಿಗೇ ಆಗಲೀ ಚಂದಾ ಹಣ ಕೊಡಲು ಹಿಂದು ಮುಂದೆ ನೋಡುವಂತೆ ಮಾಡುತ್ತವೆ. ಜೊತೆಗೆ ಚಂದಾದಾರರಾಗುವುದು ಎಂದರೆ ಇಂತಿಷ್ಟು ಹಣ ಕೊಟ್ಟು, ಬಂದ ಪತ್ರಿಕೆ ಕಪಾಟ

ನೊಳಗೆ ತುರುಕಿಡುವುದಲ್ಲ ಅದರ ಜೊತೆಗೆ ಸ್ಪಂದಿಸುವುದು ಅದರ ಅಂತರ್ಯದಲ್ಲಿ ಜೊತೆಗೂಡುವ ಮೂಲಕ ಹೊಸ ಯೋಜನೆಗಗಳಿಗೆ ಸಾಧ್ಯವಾಗುವುದು.

ಸಂಚಿಕೆಗಳನ್ನು ನಿಯಮಿತವಾಗಿ ಕೊಡುವುದರ ಹಿಂದೆ ಕೂಡ ಅನೇಕ ತೊಂದರೆ ಗಳಿವೆ. ಕವಿತೆಗಳು ರಾಶಿ ರಾಶಿ ಬಂದ ಹಾಗೆ ಲೇಖನಗಳು ಬರುವುದಿಲ್ಲ ಬರುವ ಕವನಗಳಲ್ಲಿ ಜೊಳ್ಳು ಕಳೆದು ಉಳಿಯಬಹುದಾದದ್ದು ಒಂದೋ ಎರಡೋ, ಸಂಪಾದಕರೇ ಯಾರನ್ನಾದರೂ ಲೇಖನ ಬರೆದುಕೊಡಲು ಕೇಳಿದರೆ ಅವರಿಗಂತೂ ಬಿಡುವಿಲ್ಲದ ಕೆಲಸಗಳು ! ಜೊತೆಗೆ ತಾವು ಬರೆದು ನಮ್ಮ ಪತ್ರಿಕೆಗೆ ಕೊಡುವುದೇ ಮಹಾ ಪ್ರಸಾದ ಎಂಬ ಧೋರಣೆ. ಈ ಹಿಂದೆ ಯಾವುದೋ ಪತ್ರಿಕೆಯಲ್ಲಿ ಅಥವಾ ಪುಸ್ತಕದಲ್ಲಿ ಈಗಾಗಲೇ ಪ್ರಕಟವಾಗಿರುವುದನ್ನ ಬಳಸಿಕೊಳ್ಳಿ ಎನ್ನುವ ಔದಾರ್ಯ, ಒಳ್ಳೆಯ ಬರಹಗಳಿಲ್ಲದೆ ಸಂಚಿಕೆ ರೂಪಿಸಲು ಮನಸ್ಸು ಬಾರದೇ ಒಬ್ಬೊಬ್ಬರ ಮನೆಗೆ ಆಫೀಸುಗಳಿಗೆ ನಕ್ಷತ್ರಿಕರ ಹಾಗೆ ತಿರುಗುವುದು ಸಂಪಾದಕರ ಪಾಡು, ಇದರ ಜೊತೆಗೆ ಪ್ರೆಸ್ಸಿನ ತೊಂದರೆಗಳು ಹಣದ ಸಮಸ್ಯೆ-ಒಂದೇ ಎರಡೇ. ಹಣವಿಲ್ಲದೆ ಉತ್ಸಾಹ ಅಷ್ಟೇ ಬಂಡವಾಳವಾಗದು. ಈಚೆಗೆ ಭೇಟಿಯಾಗಿದ್ದ ಸಂಪಾದಕ ಮಿತ್ರರೊಬ್ಬರು ಹೇಳಿದ್ದು ! "ನಾನು ಮಾತ್ರ ಯಾರಲ್ಲೂ ಚಂದಾ ಹಣಕ್ಕೆ ಕೈಯೊಡ್ಡಲಾರೆ. ಬೇಕಾ ದವರು ಆಸಕ್ತಿಯಿಟ್ಟು ನನ್ನ ಕೆಲಸದಲ್ಲಿ ನಂಬಿಕೆಯಿಟ್ಟು ಚಂದಾ ಹಣ ಕೊಡಲಿ" ಎಂದು. ತಮ್ಮ ಜೇಬಿನಿಂದ ಹಣ ಹಾಕುವ ಸಂಪಾದಕರಿಗೆ ಉಂಟಾಗುವ ಸಾಹಿತ್ಯೋ ದ್ಧಾರದ ಕಾಂಪ್ಲೆಕ್ಸ್ ಅವರಲ್ಲಿತ್ತು. ಈ ಮನೋಭಾವ ನಮ್ಮ ಈಗಿನ ಪರಿಸ್ಥಿತಿಗೆ ಸರಿಹೊಂದಲಾರದು. ಓದುಗರು ಪತ್ರಿಕೆಯನ್ನ ತಲುಪಲಾರದ ಸ್ಥಿತಿಯಲ್ಲಿ ಪತ್ರಿಕೆಗಳೇ ತಮ್ಮ ಓದುಗರನ್ನು ನಿರ್ಮಿಸಿಕೊಳ್ಳುವ ಅವರ ಹತ್ತಿರ ಹೋಗುವ ಕೆಲಸ ಅನಿವಾರ್ಯ. ನಾವು ಮಾತ್ರಾ ಪತ್ರಿಕೆ ಮುದ್ರಿಸಿ ಅಟ್ಟದಲ್ಲಿ ತುಂಬಿಡುತ್ತೇವೆ. ಓದುವವರು ಓದಿ ಬಿಡುವವರು ಬಿಡಿ ಎನ್ನುವುದರಲ್ಲಿ ಯಾವ ಸಾರ್ಥಕ್ಯವೂ ಇಲ್ಲ. ಸರಿಯಾದ ಓದುಗ ರನ್ನ ತಲುಪುವುದೂ ಒಂದು ಪತ್ರಿಕೆ ಎದುರಿಸುವ ಮುಖ್ಯ ಸವಾಲುಗಳಲ್ಲೊಂದು. ಕಾಲಕ್ರಮೇಣ ನಮ್ಮ ಪತ್ರಿಕೆಯ ಗುಣಮಟ್ಟಕ್ಕೆ ಅನುಗುಣವಾಗಿ ಓದುಗರ ವಲಯವೂ ಬೆಳೆದೀತು.

ನಮ್ಮ ಸಾಹಿತ್ಯ ಪತ್ರಿಕೆಗಳಿಗೆ ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಮಹತ್ವ ಹಾಗೂ ಇತಿಹಾಸ, ಸಂದಿಗ್ಧವಾದ ವರ್ತಮಾನಗಳಿವೆ. ಈಗಿನ ನಮ್ಮೆಲ್ಲಾ ನಿರಾಸೆ ಗಳನ್ನ ತೊಳೆಯುವ ಹಾಗೆ ಮತ್ತೊಂದು ಹೊಸಾಪರ್ವ ಸಾಧ್ಯವಾಗಬಹುದೆನ್ನುವ ಆಸೆ ಕ್ಷೀಣವಾಗಿಯಾದರೂ ಉಳಿದಿದೆ.

ಭಾರತೀಯ ನವ್ಯಕಲೆ ; ಒಂದು ಅವಲೋಕನ

ವಿಜಯರಾವ್

ಭಾರತೀಯ ನವ್ಯಕಲೆಯ ಅವಲೋಕನದಲ್ಲಿ 'ನವ್ಯ' ಎಂದರೇನು ಎಂಬ ಪ್ರಶ್ನೆಗೆ ಮೊದಲು ಉತ್ತರ ಕಂಡುಕೊಳ್ಳುವುದು ಮುಖ್ಯವೆನಿಸುತ್ತದೆ.

'ನವ್ಯ'ವೆಂದರೆ; ಹೊಸ ತಿರುವು, ರೂಢಿಗತವಾಗಿ ಬಂದಿರುವುದಕ್ಕೊಂದು ಬ್ರೇಕು. ಸಂಪ್ರಾದಾಯಿಕ ಅಥವಾ ರೂಢಿಗತವಾಗಿ ಬಂದಿರುವುದನ್ನು ಬಿಟ್ಟುಕೊಡುವುದು. ಅಥವಾ ರೂಢಿಗತವಾಗಿ ಬಂದಿರುವ ಅಂಶಗಳನ್ನು ಕಾಲ, ಸಮಯ ಸಮಾಜ ಮತ್ತು ಪರಿಸರಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು ಅಥವಾ ಒಂದು ಮಾರ್ಪಾಟು. ರೂಢಿಗತವಾಗಿ ಬಂದಿರುವ ವಸ್ತು ವಿಷಯಗಳನ್ನು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ನೋಡುವ ಬಗೆಯಲ್ಲಿ ಅಥವಾ ಆಸ್ವಾದಿಸುವ ಬಗೆಯಲ್ಲಿ ಬದಲಾವಣೆಯಾದಾಗ (change) 'ನವ್ಯ'ವಾಗುವುದು. ಇನ್ನೊಂದು ಸಂಸ್ಕೃತಿಯ ಅಂಶಗಳು ಮೂಲಪ್ರಾಂತದ ಸಂಸ್ಕೃತಿಯ ಅಂಶಗಳೊಂದಿಗೆ ಬೆಸೆದುಕೊಂಡು ಹೊಸ ರೂಪ ತಳೆದಾಗ ನವ್ಯವಾಗುವುದು. ಹೊಸ ರೀತಿಯಲ್ಲಿ ತನ್ನದೇ ಛಾಪು ಎನ್ನುವ ಥರದಲ್ಲಿ ಹೇಳಬೇಕೆನ್ನುವ ಕಲಾವಿದನ ಒಳ ಒತ್ತಡದ ಆಸೆಯು 'ನವ್ಯ'ಕ್ಕೆ ಕಾರಣವಾಗುತ್ತದೆ.

ದೃಶ್ಯಕಲೆಗೆ ಸಂಬಂಧಪಟ್ಟಂತೆ ನವ್ಯ ಅಥವಾ ಆಧುನಿಕ ಎಂಬುದು ಇದೇ ವರ್ಷ ಇದೇ ಕೃತಿಯಿಂದ, ಈ ಶತಮಾನವೇ ಎಂದು ಗುರುತಿಸುವುದು ಅಸಾಧ್ಯದ ಮಾತು. "ಕಲಾವಿದನ ಕೊಡುಗೆ ಮತ್ತು ಸಹೃದಯಿಯ ಆಸ್ವಾದನೆ" ಈ ಕ್ರಿಯೆಯಲ್ಲಿಯೇ ನವ್ಯ ಮತ್ತು ಆಧುನಿಕತೆಯ ಪ್ರಶ್ನೆ ಮತ್ತು ಉತ್ತರ ಅಡಗಿಕೊಂಡಿರುವುದು.

ಕ್ರಿ. ಪೂ. ಮೂರನೆ ಶತಮಾನದ ಮೌರ್ಯರ ಕಲೆ ಪರ್ಷಿಯನ್ನರ ಸಂಗದಿಂದ ಆಧುನಿಕಗೊಂಡಿದ್ದರೆ: ಕ್ರಿ.ಶ. ಎರಡನೇ ಶತಮಾನದ ಕುಶಾನರಕಲೆ ಗ್ರೀಕೊ ರೋಮನ್ ಕಲೆಯಿಂದ ಪ್ರಭಾವಗೊಂಡು ಅಂದು ನವ್ಯವಾಗಿದೆ. ಅದರಂತೆ ಹನ್ನೊಂದನೆ ಶತಮಾನದಿಂದ ಹದಿನೈದನೆ ಶತಮಾನದ ಜೈನ ಚಿಕಣಿ ಚಿತ್ರಗಳಲ್ಲಿ ಒಂದು ಕಣ್ಣನ್ನು ಹೊರಚಾಚಿ ತೋರಿಸಿದ್ದು, ಕ್ಯಾಲಿಗ್ರಾಫಿಕ್ ರೇಖೆಗಳನ್ನು ಬಳಸಿದ್ದು ನವ್ಯವೇ ಹೌದು. ಮೊಘಲ ಆಳ್ವಿಕೆಯಲ್ಲಿ ಬಂದ ಮೊಘಲ ಚಿಕಣಿ ಚಿತ್ರಗಳು ಭಾರತೀಯರಿಗೆ ಅಂದು ಹೊಸತು. ಇದಕ್ಕೆ ಸ್ವಲ್ಪ ಭಿನ್ನವಾಗಿ ಕೃಷ್ಣ ಲೀಲೆಯನ್ನು ಇತರ ಪೌರಾಣಿಕ ವಿಷಯಗಳನ್ನು ಮುಂದುಮಾಡಿಕೊಂಡ ನವ್ಯವೇ ಸರಿ. ಹೀಗೆ ಭಾರತೀಯ ಕಲೆ ಬಾಹ್ಯಸಂಸ್ಕೃತಿಯ ಸಂಗದಿಂದ ಮತ್ತು ಅಂದಿನ ಸಾಮಾಜಿಕ,

ಧಾರ್ಮಿಕ ಮೌಲ್ಯಗಳಿಂದ ಬದಲಾವಣೆಗೊಳಗಾಗುತ್ತಾ ಬಂದಿದೆ. ಹಿರಿಯ ಕಲಾವಿದ ಹಾಕಿಕೊಟ್ಟ ದಾರಿಯನ್ನೇ ಶಿಷ್ಯರು ಹೆಚ್ಚು ಕಡಿಮೆ ಅದೇ ಶೈಲಿಯಲ್ಲಿ ಮುಂದೆ ಸಾಗಿದ್ದರಿಂದ, ಕಲೆಗೆ ರಾಜಾಶ್ರಯ ದೊರೆತುದರಿಂದ, ಆಯಾ ಪ್ರಾಂತಗಳ ಆಯಾ ಕಾಲಗಳ ಶೈಲಿಗಳಾಗಿ ನಿಂತುಕೊಂಡಿವೆ. ಮುಂದೆ ಅದೇ ಶೈಲಿ ಆ ಪ್ರಾಂತದ ಸಂಪ್ರದಾಯವಾಗಿ ಕಾಣುತ್ತದೆ.

ಕಾಲಕಾಲಕ್ಕೆ ಭಾರತೀಯ ಕಲೆ ಬದಲಾವಣೆಗೊಳಗಾಗುತ್ತ ನವೀನವಾಗುತ್ತಿರುವಾಗ ಭಾರತೀಯರ ಮೂಲ ಕಲೆ ಹೇಗಿದೆ, ಎಲ್ಲಿದೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಕ್ರಿ. ಪೂ. ಎರಡನೇ ಶತಮಾನದಿಂದ ಕ್ರಿ. ಶ. ಆರನೇ ಶತಮಾನದ ವರೆಗಿನ ಅಜಂತಾದ ಭಿತ್ತಿಚಿತ್ರಗಳು ನಮ್ಮ ಭಾರತೀಯ ಸಂಸ್ಕೃತಿಯ ಚಿತ್ರಗಳೆ ? ಕ್ರಿ.ಪೂ. 3000ದಲ್ಲಿ ಸಿಂಧೂಕೊಳ್ಳದ ಸಂಸ್ಕೃತಿಯಲ್ಲಿ ಸಿಕ್ಕ ಶಿಲ್ಪಗಳು ಭಾರತೀಯ ಸಂಸ್ಕೃತಿಯ ಶಿಲ್ಪಗಳೆ ? ಅಜಂತಾದ ಶೈಲಿಯನ್ನಾಗಲಿ, ಸಿಂಧೂಶಿಲ್ಪಗಳನ್ನಾಗಲಿ ದೇವಾಲಯಕ್ಕೆ ಅಂಟಿಕೊಂಡು ಬಂದಿರುವ ದೇವತಾ ಶಿಲ್ಪಗಳ ಶೈಲಿಯನ್ನೇ ಭಾರತೀಯ ಕಲೆಯ ಮೂಲ ಬೇರು ಎಂದು ಪರಿಗಣಿಸಿದರೆ ಭಾರತೀಯ ಕಲೆಯ ಅಂತರಿಕ ಸತ್ವ ಅರಿತುಕೊಳ್ಳುವುದರಲ್ಲಿ ತೊಡಕುಂಟಾಗುವುದು ಸಹಜ.

ಭಾರತೀಯ ಚಿತ್ರದಲ್ಲಿಯ ಶಿಲ್ಪದಲ್ಲಿಯ ಮೂಲ ಅಂತಃಶಕ್ತಿಯೆಂದರೆ ಕಥಾನಕ ರೂಪದ ಹಂದರ ಸಾಹಿತ್ಯಕ ಅನುಭವ. ಇಹ ಲೋಕದ ಅನುಭವದಿಂದ ಜಾರಿಸಿ ದೇವತ್ವಲೋಕದ ಪಾತಳಿಯ ಮೇಲೆ ಕೊಂಡೊಯ್ಯುವ ಪಾರಮಾರ್ಥಿಕದ ಅನುಭವ. ಶೈಲಿ, ಬಣ್ಣರೇಖೆ, ಮೈವಳಿಕೆ,ಸೌಂದರ್ಯಾನುಭವದ ಪೂರಕಗಳು ಹೊರತು ಅದೇ ನಮ್ಮ ಕಲಾ ಪರಂಪರೆಯ ಮೂಲ ಅಂಶಗಳಾಗಿ ಕಾಣುತ್ತಿಲ್ಲ. ಭಾರತೀಯ ಕಲೆಯ ಅಂತಃಶಕ್ತಿ;, ಘನೀಕೃತರೂಪದಲ್ಲಿ ನಿರೂಪಣಾ ಶೈಲಿಯಲ್ಲಿ, ಸರಳ ಸತ್ವಸೂಚಿಯಲ್ಲಿ ಸರಳರೂಪಕಗಳಲ್ಲಿ ಪ್ರಕಟಗೊಂಡ ಅನೇಕ ಉದುಹರಣೆಗಳಿವೆ ನಮ್ಮ ಕಲಾ ಪರಂಪರೆಯಲ್ಲಿ.

ಭಾರತೀಯ ಕಲೆಗೆ ಧಿಡೀರ್ ನವ್ಯತೆ ಬಂದಿದ್ದು ಬ್ರಿಟಿಷ್ ಕಲಾ ಶಾಲೆಗಳಿಂದ ಮತ್ತು ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಅಂತರಾಷ್ಟ್ರೀಯ ಕಲಾಶಕ್ತಿಯ ಪ್ರವಾಹದಲ್ಲಿ ಧುಮುಕುವ ಯತ್ನದಲ್ಲಿ ಆ ದಿನಗಳಿಂದಲೇ ಕಥಾನಕದ ಹಂದರ ಮತ್ತು ಸಾಹಿತ್ಯಿಕ ಪುಳಕ, ಪಾರಮಾರ್ಥಿಕ ಅನುಭವಗಳು ಹಿಡಿತಗೊಂಡು, ಬಣ್ಣ, ರೇಖೆ, ರೂಪ, ಸಂಯೋಜನೆಗೆ ಪ್ರಾಶಸ್ತ್ಯಕೊಟ್ಟಿರುವುದು ಕಾಣುತ್ತದೆ.

ಇಂಗ್ಲೀಶ್ ಕಲಾ ಶಾಲೆಗಳಿಂದ ಭಾರತೀಯರಲ್ಲಿದ್ದ–ಕಲೆ ವಂಶಪಾರಂಪರ್ಯವಾದದ್ದು, ದೈವದತ್ತವಾಗಿ ಬಂದದ್ದು ಎಂಬ ಅಂಶಗಳು ಬದಲಾದವು. ಕಲೆಯಲ್ಲಿ ಆಸಕ್ತಿ ಅಭಿರುಚಿ ಮತ್ತು ಸ್ವೀಚತಪಿರುವ ಯಾವ ವಿದ್ಯಾರ್ಥಿಯೂ ಕೃತಿಯನ್ನು ನಿರ್ಮಿಸಬಹುದಾಯೀತು. ಕಲೆ ಕರಕುಶಲವಾಗಿ ಮಾರ್ಕೆಟ್ಟಿನ ವಸ್ತುವಾಯಿತು. ಕಲೆ ಒಂದು ಸಮಾಜದ, ಒಂದು ಜನಾಂಗದ ದೈವಿಕ ಮತ್ತು ಪಾರಮಾರ್ಥಿಕ

ಅಂಶದಿಂದ ಬರಿದಾಗಿ (ಖಾಲಿಯಾಗಿ) ಗೋಡೆಯಾಲಂಕಾರಿಕ ಪರಿಕರವಾಗಿ ಮಾರ್ಪಟ್ಟಿದ್ದು ಒಂದು ಹೊಸತನ ಅಥವಾ ನವ್ಯತೆ. ಇದನ್ನು ನವ್ಯಕಲೆಯೆಂದು ಪರಿಗಣಿಸುವುದು ಸರಿಯಾ ತಪ್ಪು ಎನ್ನುವುದು ತಮಗೆ ಬಿಟ್ಟದ್ದು. ಗೋಡೆಯಲಂಕಾರ ಹೊಸದಲ್ಲ; ವಾತ್ಸಾಯನನ ಕಾಮಸೂತ್ರದಲ್ಲಿ ಕೊಠಡಿ ಅಲಂಕಾರ ಕುರಿತು ಬಂದಿದೆ ಮತ್ತು ಮಹಾಭಾರತದಲ್ಲಿ ಅರಮನೆ ಗೋಡೆ ಅಲಂಕರಿಸಿದ ಸಂದರ್ಭವೂ ಇದೆ.

19 ನೇ ಶತಮಾನದ ಕೊನೆಯಲ್ಲಿ ಬರುವ ರವಿವರ್ಮ, ಭಾರತೀಯ ಪೌರಾಣಿಕ ವಿಷಯಗಳನ್ನೊಳಗೊಂಡ. ತಾಂತ್ರಿಕ ಶಕ್ತಿಯನ್ನು ಮೆರೆಸುವ ತೈಲ ಚಿತ್ರಗಳನ್ನು ನೀಡಿದ್ದು ನವ್ಯತೆಯ ಒಂದು ಹಂತ. ಅದರಂತೆ ಅಮೃತಾಶೇರ್‌ಗಿಲ್ ಭಾರತೀಯ ನಿತ್ಯ ಜನಜೀವನವನ್ನು ಮೇಲ್ಮೈಮಟ್ಟದಲ್ಲಿ. ರಾಜಸ್ತಾನಿ ಮತ್ತು ಮೊಘಲ ಶೈಲಿಯನ್ನಳವಡಿಸಿಕೊಂಡು ಕೃತಿಗಳನ್ನು ರಚಿಸಿದ್ದು ನವ್ಯತೆಯ ಇನ್ನೊಂದು ಮುಖ.

ಬೆಂಗಾಲ ಕಲಾ ಶಾಲೆಯಲ್ಲಿ (1911-1948) ಭಾರತೀಯ ಕಲೆಯ ಪುನರೋತ್ಥಾನದ ಸಂಗತದಲ್ಲಿ, ಭಾರತೀಯ ಕಲೆಯ ಜೀವಾಳವೆಂದರೆ ಲಾಲಿತ್ಯಪೂರ್ಣರೇಖೆಗಳು. ಪೌರಾಣಿಕ ವಿಷಯಗಳು ಮತ್ತು ರೊಮ್ಯಾಂಟಿಕ್ ಅನುಭವನೀಡುವ ವಾಶ್ ಟೆಕ್‌ನಿಕ್‌ನ ಜಲವರ್ಣದ ಚಿತ್ರಗಳು. ಅಂದಿನ ದಿನಗಳಲ್ಲಿ ಹಳತನ್ನ ಮೆಲಕು ಹಾಕಿದ್ದು ಸಹ ನವ್ಯತೆಯೆ. ಇದೇ ಸಮಯದ ಆಸುಪಾಸಿನಲ್ಲಿ ಗಗನೇಂದ್ರನಾಥ ಟಾಗೋರ್ (1867-1938) ಫ್ರೆಂಚ್ ಕ್ಯುಬಿಸಂನ ಹೋಲುವ ಸಂಯೋಜನೆಗಳನ್ನು ನೀಡುವುದನ್ನು ಭಾರತದ ನವ್ಯತೆಯ ಮೊದಲ ಹಂತವೆಂದು ಪರಿಗಣಿಸಿದ್ದುಂಟು.

50 ರ ದಶಕದಲ್ಲಿ ಬೆಳೆದ ಪ್ರೊಗ್ರೆಸಿವ್ ಆರ್ಟಿಸ್ಟ್ ಗ್ರೂಪ್ (Progressive artist group 1940-45) ಮತ್ತು ಮುಂದಿನ ಅನೇಕ ಕಲಾವಿದರಲ್ಲಿ ಬಣ್ಣ ರೇಖೆಗಳಿಗೂ, ಆಕಾರಗಳಿಗೂ ತನ್ನದೇ ಆದ ಅಸ್ತಿತ್ವವಿದೆ. ಅವುಗಳ ಸಂಯೋಜನೆಯಿಂದ ಭಾವದ ತರಂಗಗಳನ್ನೆಬ್ಬಿಸಲು ಸಾಧ್ಯ ಎನ್ನುವಂತಿದೆ. ತಾಂತ್ರಿಕ ರಚನೆ ಮತ್ತು ಜನಪದ ಕಲೆಯ ಶಕ್ತಿಯನ್ನು ಬಳಸಿಕೊಂಡು ನವ್ಯತೆ ಮೂಡಿಸಿದ್ದು ಇದೆ. ವಸ್ತು ವಿಷಯವನ್ನು ಪುಷ್ಟಿಗೊಳಿಸಲು, ಕಲಾವಿದ ಮತ್ತು ವಸ್ತುವಿನ ನಡುವಿನ ವಿಶ್ಲೇಷಣೆಯ ಅನುಭವದಿಂದಲೂ ವಿಕಾರದ ಒತ್ತಡದ ರೂಪಗಳು (Forcible distorted forms) ನವ್ಯತೆಯ ಕೊಡುಗೆಯಾಗಿವೆ. ಕೆಲ ಕಲಾವಿದರು ಕೇವಲ ತಮ್ಮ ವಯಕ್ತಿಕ ಛಾಪನ್ನು ಮೂಡಿಸುವಲ್ಲಿ ಉದ್ದನೆಯ ನೀಳವಾದ (Elongated forms) ಮತ್ತು ಘನಾಕಾರಪಡೆಯುವ (Center forms) ಆಕೃತಿಗಳನ್ನ ಬಳಸಿ ತಮ್ಮದೇ ಆದ ನವ್ಯತೆಯ ಮೆರಗನ್ನು ನೀಡಿರುವುದು ಕಾಣುತ್ತೇವೆ.

50 ದಶಕಗಳಿಂದೀಚೆ ಶಿಲ್ಪಕಲೆಯುಲ್ಲಿ ಚಿತ್ರಕಲೆಗಿಂತ ಹೆಚ್ಚು ಅಮೂರ್ತ ಬಳಕೆಯಾಗಿರುವುದು ಕಾಣುತ್ತದೆ. ಯಾವ ರೂಪಾಕಾರಗಳು ಸರಳವಾಗಿ ಗ್ರಹಿಕೆಗೆ ಲಭ್ಯವಾಗುವುದಿಲ್ಲವೋ ಅಂತಹವೆಲ್ಲವನ್ನು 'ಅಮೂರ್ತಕತೆ' ಎಂದು ತಿಳಿದುಕೊಂಡು

ಸಾಗಿದಂತಿದೆ. (ಅಮೂರ್ತವೆಂಬ ಪದ ಇಂಗ್ಲೀಷಿನAbstract ನ ಯಥಾವತ್ ಅನುವಾದವಾಗಿದೆ. Abstract ಎಂದರೆ ಸತ್ವಸೂಚಿ ಎಂದು ಡಾ॥ ಶಿವರಾಮ ಕಾರಂತರು ಸೂಚಿಸಿರುವ ಪದ ಬಳಸುವುದೆ ಉತ್ತಮ) ಸರಳವಾದ ಆಕಾರ, ರೂಪ ಇರುವ ಅಥವಾ ಜ್ಯಾಮಿತಿಕಾರಗಳನ್ನು ಹೊಂದಿರುವ ಕಲೆಯನ್ನು ಅಮೂರ್ತಕಲೆಯೆಂದು ಕರೆದಿದ್ದೇವೆ, ಇಂತಹ ಕೃತಿಗಳು ಅವ್ಯಾಹತವಾಗಿ ಕಾಣಿಸುತ್ತಾ ನಡೆದಿದೆ. ಹೆಚ್ಚಿನವುಗಳಲ್ಲಿ ಸತ್ವ ಕುಂದಿ, ಸುಂದರವಾದ ತ್ರಿಮಾಸದ ಘನಾಕಾರಗಳಾಗಿ, ಕ್ಷಣಿಕ ಅನುಭವದ ತುಣಕಾಗಿ, ಸಂವೇದನೆ ಸುಳಿದುಹೋಗುತ್ತದೆ. ಶಿಲ್ಪದ ಮೈವಳಿಕೆ. ಅವಕಾಶದಲ್ಲಿನ ಚಲನೆಯೇಮುಖ್ಯ ಅಂಶಗಳಾಗಿವೆ.

ಪ್ರಿಂಟಿಂಗ್ ತಾಂತ್ರಿಕತೆಯನ್ನು ಒಂದು ಸಶಕ್ತ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಹೆಚ್ಚಾಗಿ ಬಳಸಿಕೊಂಡಿರುವುದು 70 ರ ದಶಕದಿಂದೀಚೆ. ವಸ್ತು ವಿಷಯಕ್ಕಿಂತ ತಾಂತ್ರಿಕ ಕಸರತ್ತನ್ನೆ ಹೆಚ್ಚು ಅವಲಂಬಿಸಿರುವ ಈ ಮಾದ್ಯಮವನ್ನು ಕಸರತ್ತನ್ನಾರೋಪಿಸಿ ಕೈ ಬಿಡುವಂತಿಲ್ಲ. ಇಲ್ಲಿ ಸಹ ಚಿತ್ರಕಲೆಯಂತೆ ಪಾತಳಿಗಳ ನಿರ್ಮಾಣ, ದೃಗ್ದರ್ಶನ, ರೇಷೆ ಬಣ್ಣಗಳ ಸಂಯೋಜನೆ ಮತ್ತು ಹೊಸ ಆಕಾರ ವಿಕಾರಗಳಿಗೇನು ಕೊರತೆಯಿಲ್ಲ. ಗ್ರಾಫಿಕ್ ಕೃತಿ ಪೇಂಟಿಂಗ್‌ನಷ್ಟೆ ಶಕ್ತಿಯುತವಾದದ್ದು. ಮಾಧ್ಯಮವೇ ಒಂದು ನವ್ಯತೆಯ ಮುಖವಾದರೆ, ಕೃತಿ ಒಂದೇ ಒಂದಾಗದೆ ಪ್ರತಿಗಳಾಗಿ ಹೊರ ತರುವುದಕ್ಕೆ ಸಾಧ್ಯವಾಗಿದೆ. ಸಾಕಷ್ಟು ಮೂಲ ಪ್ರತಿಗಳಾಗಿ ಪಡೆಯಬಹುದಾಗಿದೆ. ದುಬಾರಿ ವ್ಯಯವಿಲ್ಲದೆ ಸಾಮಾನ್ಯನು ಸಹ ಗ್ರಾಫಿಕ್ ಕಲಾಕೃತಿಯೊಂದನ್ನು ತನ್ನ ಮನೆಯಂಕಣದಲ್ಲಿ ತೂಗಿಸಿಕೊಂಡು ಕಲಾ ಸಹೃದಯಿಯಾಗುವುದಕ್ಕೆ ಅನುಕೂಲವಾಗಿರುವುದು ನವ್ಯತೆಯೇ ಸರಿ.

50 ರ ದಶಕದಿಂದೀಚಿನ ನವ್ಯ ಕಲೆ ವೈಯಕ್ತಿಕ ಅಭಿವ್ಯಕ್ತಿ, ವಸ್ತು ವಿಷಯ ಕಲಾವಿದನ ಸ್ವತಂತ್ರವಾದ ಆಯ್ಕೆ. ನಮ್ಮ ಸಂಸ್ಕೃತಿಯ ಚಿತ್ರಕಲೆ ಪ್ರದರ್ಶನ ಕಲೆಯಂತಿದ್ದು (Performing arts ನಾಟಕ. ನೃತ್ಯ) ಸರ್ವರಿಗೂ ಒಂದೇ ಭಾವರಸವನ್ನು ನೀಡುವಂತೆ ಕಾಣುತ್ತಿದ್ದರೆ, ನವ್ಯ ವೈಯಕ್ತಿಕ ಅಭಿವ್ಯಕ್ತಿಯಾಗಿ, ಪ್ರತಿ ಪ್ರೇಕ್ಷಕನಿಗೆ ಸಂವೇದನೆ, ಅನುಭವ ಬೇರೆ ಬೇರೆ ಸ್ಥರದಲ್ಲಿ ನೀಡುವ ಹಂತದಲ್ಲಿದೆ. ದೃಶ್ಯ ಭಾಷೆ. ದೃಶ್ಯವ್ಯಾಕರಣಕ್ಕೆ EUropean Material ಹೆಚ್ಚಿನ ಒತ್ತುಕೊಡುತ್ತಿರುವುದರಿಂದ ನವ್ಯಕಲೆಯನ್ನು ಅರಗಿಸಿಕೊಳ್ಳಲು ತೊಂದರೆಯಾಗುತ್ತಿದೆ. ಭಾರತೀಯ ಚಿತ್ರ, ಸಂಸ್ಕಾರ, ಕಲೆಯಲ್ಲಿ ಕಥಾನಕ ಹಂದರ ಮತ್ತು ಸಾಹಿತ್ಯಕ ಅನುಭವಕ್ಕೆ ಒಗ್ಗಿಕೊಂಡು ಬಂದಿರುವುದರಿಂದ, ಆ ತೆರಹವನ್ನೇ ಆಶಿಸುತ್ತಿರುವುದರಿಂದ ನವ್ಯಕಲೆ ಅರ್ಥವಾಗದ ಕಗ್ಗಂಟಾಗಿದೆ. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿ, 1 ನೇ ತರಗತಿಯಿಂದ ಸಾಹಿತ್ಯದ ಭಾಷೆ, ವ್ಯಾಕರಣ ಕಲಿಯುವುದಕ್ಕೆ ಎಷ್ಟು ಅವಕಾಶವಿದೆಯೋ ಅಷ್ಟು ದೃಶ್ಯಕಲೆಯ ಭಾಷೆ, ವ್ಯಾಕರಣಕ್ಕೆ ಅವಕಾಶವಿಲ್ಲದಿರುವುದರಿಂದ ನವ್ಯಕಲೆಯಲ್ಲಿ ಅಷ್ಟೊಂದು ಅಭಿರುಚಿ ಕಾಣುತ್ತಿಲ್ಲ, ಅರ್ಥವಾಗುತ್ತಿಲ್ಲ.

ಭಾರತೀಯ ಸಂಸ್ಕೃತಿ ಅನೇಕ ಸಂಸ್ಕೃತಿಗಳ ಒಗ್ಗೂಡಿಕೆಯಿಂದಾಗಿರುವುದು. ಕಲೆ ತನ್ನ ಸಂಸ್ಕೃತಿ, ಜೀವನ, ಪರಿಸರ, ಸಮಾಜದ ತೀವ್ರತೆ(Tension). ಆಡಳಿತದ ಒತ್ತಡ ಮತ್ತು ಆಯಾ ಪ್ರಾಂತ್ಯದಲ್ಲಿರುವ ಚಿನ್ಹೆಗಳನ್ನು (ಸಂಜ್ಞೆಗಳನ್ನು) ಒಗ್ಗೂಡಿಸಿಕೊಂಡು ಹೊರ ಬರುತ್ತಿರುವುದರಿಂದ ನವ್ಯ ಅರ್ಥವಾಗುವುದು ಕಠಿಣವೇ ಸರಿ. ಪ್ರಾಂತಕ್ಕನುಗುಣವಾಗಿ ಕಲೆಯನ್ನು ವಿಂಗಡಿಸಿ ನವ್ಯತೆಯನ್ನು ಕಂಡುಕೊಳ್ಳುವುದು ಸೂಕ್ತ.

ನವ್ಯ ಕಲೆಯಲ್ಲಿ ಸಾಹಿತ್ಯಕ ಅನುಭವವನ್ನಾಗಲಿ, ಕಥಾನಕ ಹಂದರವನ್ನಾಗಲಿ ಕಂಡುಕೊಳ್ಳುವುದು ಮುಖ್ಯವಲ್ಲ. ಅಲ್ಲಿರುವ ವಸ್ತುವನ್ನು, ಒಣ ವಸ್ತುವನ್ನಾಗಿ ಗಣನೆಗೆ ತೆಗೆದುಕೊಂಡು, ದೃಶ್ಯ ಮಾಧ್ಯಮದಲ್ಲಿ ಎಷ್ಟು ಪರಿಣಾಮಕಾರಿಯಾಗಿ (ಚಿತ್ರದಲ್ಲಿರುವ) ಹೇಳಿದ್ದಾನೆ ಮತ್ತು ಅದು ಹೇಗೆ ಪರಿಣಮಿಸುತ್ತಿದೆ ಎನ್ನುವುದು ಮುಖ್ಯ. ಕಲಾವಿದ ವಸ್ತು ವಿಷಯವನ್ನ ಹೇಗೆ ನೋಡಿದ್ದಾನೆ, ಅದನ್ನು ಹೇಗೆ ತೋರಿಸುತ್ತಿದ್ದಾನೆ, ಅದನ್ನ ನಾವು ಹೇಗೆ ನೋಡುತ್ತಿದ್ದೇವೆ ಎನ್ನುವ ಈ ಕ್ರಿಯಾ ವಿಧಾನದಲ್ಲಿಯೇ ನವ್ಯತೆ ಅಡಗಿದೆ ಎಂದು ಇನ್ನೊಮ್ಮೆ ಒತ್ತಿ ಹೇಳಬೇಕಾಗಿದೆ. ಚಿತ್ರ, ಶಿಲ್ಪ ಯಾವುದೇ ಕಾಲಕ್ಕೆ ಸಂಬಂಧಿಸಿರಬಹುದು. ಅದರಲ್ಲಿಯ ವಸ್ತು ವಿಷಯ ಕಾಲ, ಪರಿಸರಕ್ಕೆ ತಕ್ಕಂತೆ ನವ್ಯತೆ ಪಡೆಯುತ್ತಾ ಆಸ್ವಾದನೆಯಾಗುತ್ತದೆ.

ನವ್ಯತೆಯ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಅದು ತನ್ನ ಬಣ್ಣ, ರೇಖೆ, ಆಕಾರಗಳ ಸಂಯೋಜನೆಯಿಂದ ನೋಡುಗನನ್ನು ಹಿಡಿದು ನಿಲ್ಲಿಸುತ್ತದೆ ಯಾ ಆಕರ್ಷಿಸುತ್ತದೆ. ಈ ಆಕರ್ಷಣೆಯ ನಂತರ ಸಂವೇದನೆ, ತದನಂತರ ಕಥೆ ಸಾಹಿತ್ಯ....'ನವ್ಯ' ಕಲೆ. ಇನ್ನೊಂದು ಮುಖದಲ್ಲಿ ಒಣ ಸುಂದರ. ಸುಂದರವಾದ ವ್ಯವಹಾರಿಕ ವಸ್ತುವಾಗಿ ಬದಲಾಗಿದೆ.

ಸಂಚಯದ ನವ್ಯಕಲೆಯ ಅಧ್ಯಯನ ಕಮ್ಮಟದಲ್ಲಿ ಮಂಡಿಸಿದ ಪ್ರಬಂಧ

ಅನಾವರಣ

ನಲ್ಕೆ,

ತುಂಬಾ ದಿವ್ಸ ಆಗಿತ್ತಲ್ವ ಹಾಗೆ ಕೂತು ಹರಟೆ ಕೊಚ್ಚಿ, ಆವತ್ತು ನೀನೇನೊ ನಿನ್ನೊಳಗನ್ನು ಶೋಧಿಸಿ ಮಾತಿನ ವ್ಯರ್ಥತೆ ಬಗ್ಗೆ ಫಿಲಾಸಫಿ ಹೇಳಿದ್ದಿ, ಏನಾದರೂ ಅಂದುಕೊ ನಮ್ಮ ಜೀವನದ ಪ್ರತಿಕ್ರಿಯೆಯೂ ತರ್ಕಬದ್ದ ಆಗಿರಬೇಕು ಅನ್ನೋದನ್ನ ನಾನು ಒಪ್ಪಲ್ಲ. ಅಲ್ದೆ ಹಾಗಾದರೆ ಅದೊಂದು ವ್ಯವಸ್ಥಿತ ನಾಟಕ ಆಗಿ ಬಿಡಲ್ವ. ತರ್ಕಹೀನತೆಯೆ ಬದುಕಿನ ಎಲ್ಲ ಕ್ರಿಯೆಯಲ್ಲಿ ಮುಖ್ಯ ಪಾತ್ರ ವಹಿಸೋದು. ಹೀಗಾಗಿ ಸಂಬಂಧಗಳ ಛಿದ್ರತೆ. ನಾವು ಈ ಸಂಬಂಧಗಳ ಛಿದ್ರತೆ ಬಗ್ಗೆ ಮಾತಾಡ್ತ ನೇಮಿಚಂದ್ರನ ಕತೆಗಳ ಬಗ್ಗೆ ಸಾಕಷ್ಟು ಕಿತ್ತಾಡಿದ್ದೇವಲ್ವ, ಮನೆಗೆ ಬಂದ ಮೇಲೆ, ಇನ್ನೂ ಒಂದಿಷ್ಟು ಹೊಳೀತು. ಬರೆಯದಿದ್ದರೆ ನೂರಾರು ಚಿಂತೆಗಳ ನಡುವೆ ಅದು ಕರಗೊ ಅಪಾಯ ಇರೊದ್ರಿಂದ ತಕ್ಷಣ ಬರೆಯುತ್ತಿದ್ದೇನೆ.

ನೇಮಿಚಂದ್ರ ಅವರ ಕತೆಗಳು ಭಾವನೆಗಳನ್ನ ವೈಭವೀಕರಿಸುತ್ತೆ ಅನ್ನೊದು ನೀನು ಅವತ್ತು ಮಾಡಿದ ಮುಖ್ಯ ಆಪಾದನೆ, ಇದನ್ನ ಇಷ್ಟು ಸರಳವಾಗಿ ತೆಗೆದು ಕೊಳ್ಳದೆ ಸ್ವಲ್ಪ ಸೂಕ್ಷ್ಮವಾಗಿ ಅರ್ಥ ಹಚ್ಚಲು ಪ್ರಯತ್ನಿಸುತ್ತೇನೆ. ಭಾವನೆ ಕನಸು ಗಾರಿಕೆ ಇಂತಹ ಸೂಕ್ಷ್ಮ ಸಂವೇದನೆಗಳು ವ್ಯಕ್ತಿ ವ್ಯಕ್ತಿಗಳ ಅಂತರ್ಯದಲ್ಲಿ ಬಹಳ ಮುಖ್ಯ ಕೆಲಸ ಮಾಡ್ತ ಇರುತ್ತವೆ. ಇದು ಎಷ್ಟರ ಮಟ್ಟಿಗೆ ಹುಸಿ ಅಂತ ವಿವರಿಸೋದು ಕಷ್ಟ, "ಮತ್ತೆ ಬರೆದ ಕವನಗಳು" ಎಂಬ ಕತೆಯನ್ನೇ ತಗೋ ಅಲ್ಲಿ ಬಾಲ್ಯದ ಪೂರ್ವ ಗ್ರಹ ಪೀಡಿತ ನಿರ್ಣಯಗಳ ಅಂಕುಶಕ್ಕೆ ಸಿಕ್ಕ ಸಂಬಂಧವನ್ನ ಮುಕ್ತ ಸಂಬಂಧವೊಂದಕ್ಕೆ ತುಲನೆ ಮಾಡೋ ಪ್ರಯತ್ನ ಇದೆ. ನಾನು "ಹುಡುಗಿಯರ ಜೊತೆ ಮಾತಾಡೊದನ್ನೆ ಕ್ರಿಮಿನಲ್ ಅಪರಾಧ" ಎಂದುಕೊಂಡಿದ್ದ ಬಗ್ಗೆ ಹೇಳಿದಾಗ ನೀನೂ "ಹುಡುಗರ ಜೊತೆ ಮಾತಾಡೊದೇನಿರುತ್ತೆ ಎಂಬುದೇ ಅಹಂಕಾರವಾದ, ಹುಡುಗಿಯರನ್ನೆ ನೋಡಿದ್ರೆ ಸಾಕು ಹಲ್ಲು ಕಿರೀತಾರೆ ಎಂದು ಸಿಟ್ಟಾದ ಭಾವಗಳೆಲ್ಲ ಇತ್ತೀಚೆ ಇವರೂ ಹುಡುಗಿ ಯರ ತರಹ ಒಳ್ಳೆ ಸ್ನೇಹಿತರಾಗಬಲ್ಲರು ಅನ್ನೊದ್ರೆಲ್ಲ ಕರಗ್ತಾ ಇದೆ" ಅಂದಿರಲಿಲ್ವ, ನೇಮಿಚಂದ್ರ ಹೇಳ್ತ ಇರೊದು ಇದನ್ನೇ ಅಲ್ವ. ನಮ್ಮ ಭಾವನೆಗಳನ್ನೆ ಕತೆಯಾಗಿಸುವ ಪ್ರಯತ್ನ ಆಪ್ತ ಅನ್ನಿಸೋದು ಸಹಜ, ಮತ್ತು ನೇಮಿಚಂದ್ರರ ಹೆಚ್ಚುಗಾರಿಕೆ ಕೂಡ ಇದೇ.

ನೀನು ಹೇಳಿದ ಹಾಗೆ ಮೊದಲ ಕತೆ ಬಿಟ್ಟರೆ ಉಳಿದ ಕತೆಗಳೆಲ್ಲ ಬಿರಕು ಬಿಡುವ ಸಂಬಂಧಗಳ ಬಗ್ಗೆನೇ ಹೇಳುತ್ತೆ. ಕಾರಣವನ್ನ ಬೇರೆ ಬೇರೆ ನೆಲೆಯಲ್ಲಿ ವಿಶ್ಲೇಷಿಸುತ್ತವೆ.

ಅತಿಯಾದ ನಿರೀಕ್ಷೆಗಳೇ ಸಂಬಂಧದ ಛಿದ್ರತೆಗೆ ಅನೇಕ ಸಲ ಕಾರಣ ಆಗುತ್ತೆ. ಒಂದು ಒಳ್ಳೆ ಸೊಸೆ, ಒಳ್ಳೆಯ ಹೆಂಡತಿ ಎರಡೂ ಆಗಬೇಕು ಅಂತ ಬಯಸುವುದು ಅವಳ ವ್ಯಕ್ತಿತ್ವವನ್ನು ಹಿಗ್ಗ ಮುಗ್ಗ ಎಳೆದಂತೆ. ಅವೆರಡೂ ಆಗದೆ ಅವಳು ಒಳ್ಳೆಯ ಹುಡುಗಿ ಆಗಬಹುದಲ್ಲ. ಬಿರುಕು ಬಿಟ್ಟರೂ ತೇಪೆ ಹಾಕಿಕೊಂಡು ಸಾಗಿಸೊ ನಮ್ಮ ಸಮಾಜದ ಸಂಬಂಧಗಳ ಕುರಿತು ನೇಮಿಚಂದ್ರ ಗುರುತಿಸೊ ಒಂದು ಅಂಶ ತುಂಬಾ ಕುತೂಹಲ ಕಾರಿ ಆಗಿದೆ. ಡೈವರ್ಸ್ ಅನ್ನೊ ಶಬ್ದದ ಕುರಿತು ಇವರಿಗೆಲ್ಲ ತುಂಬಾ ಮುಜುಗರ ಇದೆ ಅಲ್ವ. ವಿಚ್ಛೇದನ ಆಗದಿದ್ರೆ ಅವರೆಲ್ಲ ಸುಖವಾಗಿದ್ರು ಅಂತ ಅಲ್ಲ. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಅಸಹಾಯಕತೆಗೆ ಅನಿವಾರ್ಯವಾಗಿ ಅಂಟಿಕೊಂಡು ಬಾಳಿದ್ರು ಅಂತ ಸರಿ ಅನ್ನಿಸುತ್ತೆ- ಗಂಡ ಎಷ್ಟೇ ಕೆಟ್ಟವನಾಗಿದ್ರು ಅವನ ಜೊತೆ ಬಾಳದೆ ಅವರಿಗೆ ಬೇರೆ ಏನು ದಾರಿ ಇತ್ತು?

ಅವರ ಕತೆಗಳನ್ನ 'ಸ್ತ್ರೀವಾದಿ' ಅಂದರೆ ನೀನೆ ಹೊಡೆದೇ ಬಿಡುತ್ತೀಯ ಅಂತ ಗೊತ್ತು. ಪ್ರತ್ಯೇಕತೆ ವಿರುದ್ಧ ಚಳುವಳಿ ಸಾರಿರೋ ನಿನ್ನ ಹತ್ತಿರ ಹಾಗೆ ಹೇಳೊ ಧೈರ್ಯನೂ ನನಗಿಲ್ಲ. ಜೊತೆಗೆ ಅವಶ್ಯಕತೇನೂ ಇಲ್ಲ. 'ಕಪ್ಪು ಮೋಡ, ಬೆಳ್ಳಿ ಅಂಚು' ಬಿಟ್ಟರೆ ಉಳಿದ ಕತೆಗಳಲ್ಲಿ 'ಸ್ತ್ರೀವಾದ' ದ ಬೊಬ್ಬೆ ಅತಿಯಾಗಿ ಏನು ಇಲ್ಲ. ಅಂದರೆ ಅಂತರ್ಯದಲ್ಲಿ ನೇಮಿಚಂದ್ರರ ಕತೆಗಳಲ್ಲೆಲ್ಲ ಮಾತನಾಡೋ ಹುಡುಗಿ ತುಂಬಾ ದಿಟ್ಟೆ ಸಮಾಜದ ಸವಾಲಿಗೆ ಎದೆ ಒಡ್ಡುವವಳು. ಅಷ್ಟೇನು ಪ್ರಬಲ ಪಾತ್ರವಲ್ಲದ 'ಸಾವಿನತ್ತ ಒಂದು ಹೆಜ್ಜೆಯ ಶಶಿ ಬಿಟ್ಟರೆ ಉಳಿದವರೆಲ್ಲ ತುಂಬಾ ಗಟ್ಟಿ ವ್ಯಕ್ತಿತ್ವವುಳ್ಳವರು. ಮುಖ್ಯ ಅನಿಸಿದ್ದು ಸ್ತ್ರೀವಾದದ ಕುರಿತ ಘೋಷಣೆಗಳು ಎಲ್ಲೂ ಇರದೆ ಇವೆಲ್ಲ ಮಾನವೀಯ ಸಾಧ್ಯತೆಗಳಾಗೇ ಇರೋದು. ನಿನ್ನ ತರಹದ ಹುಸಿ ಫಿಲಾಸಫಿಗಿಂತ ನನಗೆ ಈ ಸಹಜತೆನೇ ಇಷ್ಟ. ಸಿಟ್ಟು ಬಂದಿದೆ ಅಲ್ವ, ಸ್ವಲ್ಪ ಭೂಮಿ ಮೇಲೆ ಓಡಾಡೊವನ್ನ ಅಭ್ಯಾಸ ಮಾಡಿಕೊ ನಿನಗೂ ನಾನು ಹೇಳಿದ ಮಾತುಗಳು ಅರ್ಥವಾಗುತ್ತೆ.

ನೇಮಿಚಂದ್ರರ ಕತೆಗಳ ಪಾತ್ರ, ಓಟ. ಸಂವಿಧಾನ ಎಲ್ಲಾ ತುಂಬಾ ಸರಳ ರೇಖಾತ್ಮಕವಾಗಿ ಇರುತ್ತವೆ. 'ಜನಪ್ರಿಯ'ಕತೆ ಇರೋದೆ ಹೀಗೆ ಅಂತ ನಿನ್ನ ತರಹ ಹೇಳಿ ನಾನು ಕೈ ತೊಳೆದುಕೊಳ್ಳಲ್ಲ. ಇವೆಲ್ಲ ಕಾರ್ಯ - ಕಾರಣ ಸಂಬಂಧವನ್ನು ಆಧರಿಸಿ ಬೆಳೆಸಿರೊ ಸರಳೀಕೃತ ವಸ್ತುಗಳು. ಒಂದು ಕತೆ ಇಷ್ಟು ಶಿಥಿಲವಾಗಲಾರದು ಎಷ್ಟೋ ಕತೆಯ ವಸ್ತುವನ್ನು ಕೆಲವು ಸಾಲುಗಳು ಹೇಳಿ ಬಿಡುತ್ತೆ, ಉದಾಹರಣೆಗೆ "ರವಿ ಸಾಯಲು ಧೈರ್ಯಬೇಕು ನಿಜ. ಆದರೆ ಅದರ ಅರ್ಧದಷ್ಟು ಸಾಕಿತ್ತಲ್ಲ ಬದುಕಲು...." (ಸಾವಿನತ್ತ ಒಂದು ಹೆಜ್ಜೆ) "ಇಷ್ಟು ನೆನಪಿರಲಿ ಅಮ್ಮ ಸೋತದ್ದು ನಾನು - ಶಶಿ ಮಾತ್ರ ವ್ಯಕ್ತಿ ವ್ಯಕ್ತಿಯ ಸಂಬಂಧ ಸೋತದ್ದು. ಪ್ರೇಮ ವಿವಾಹ ಎಂಬ ವಿಚಾರವಲ್ಲ" (ನೀವು ಕಾಣದ ನಾಳೆಗಳಲ್ಲಿ) 'ಏನೊಂದು ಆಗದವರು' ಅಂತೂ ಶೀರ್ಷಿಕೆಯೇ ಸಾಕು ಕತೆಯ ಸಾರವನ್ನೆಲ್ಲ ಹೇಳಲು ಹಿಂದಿನ ಸಂಕಲನದ "ನಮ್ಮ ಕನಸುಗಳಲ್ಲಿ ನೀವಿದ್ದೀರಿ" "ತ್ರಿಕೋನದಿಂದಾಚೆಗೆ ಕತೆಗಳ ತಂತ್ರಗಾರಿಕೆಯ ವಿನೂತನತೆ

ಕೂಡ ಈ ಸಂಕಲನದಲ್ಲಿ ನಾಪತ್ತೆ ಆಗಿದೆ. ಮುಖಪುಟದಂತೆ ಸಂಕಲನವೂ ಕಪ್ಪು ಬಿಳುಪಿನ ಚಿತ್ರಗಳಷ್ಟೆ ಆಗಿದೆ. ನಿಜವಾದ ಕತೆಗಳಿನ್ನೂ ಬರಬೇಕು ಎಂಬ ಅರ್ಥಪೂರ್ಣ ನಿರಾಶೆ ನನ್ನನ್ನು ಕಾಡಿತು.

ಭಾಷೆಯಲ್ಲಿ ನೇಮಿಚಂದ್ರ ತೋರುವ ಜಾಣ್ಮೆ ವಸ್ತುವಿನ ಆಯ್ಕೆಯಲ್ಲಿ ತೋರುವುದಿಲ್ಲ ಎಂಬ ನಿನ್ನ ಮಾತು ಸರಿ ಅನ್ನಿಸಿತು. ಅದಕ್ಕಾಗಿ ಅವರ ಲೇಖನಿಯಿಂದ "ಬೆಳಗೆರೆ ಜಾನಕಮ್ಮ" "ಮೇಡಂ ಕ್ಯೂರಿ" "ವ್ಯಾನ್‌ಗೋ" ನಂತವರ ಜೀವನ ಚರಿತ್ರೆಗಳು ಅಪ್ಪಟ ಸೃಜನಾತ್ಮಕವಾಗಿ ಬರುತ್ತವೆ. ಸ್ವಂತ ವಸ್ತುವಿನ ನಿರ್ವಹಣೆಯಲ್ಲಿ ಈ ಕೌಶಲ್ಯ ಸೊರಗಿದಂತೆ ಕಾಣುತ್ತೆ. ಅವರ ಸೃಜನಶೀಲತೆ ಸೆಲೆ ಅಂತರ್ಯದಿಂದಲೇ ಬರಬೇಕಾದ ಸಾಧ್ಯತೆ ಅಲ್ಲಿ ಇರಬಹುದೇನೊ.... ಗಂಭೀರವಾಗಿ ಒಂದು ದಿನ ಇದರ ಬಗ್ಗೆ ಯೋಚನೆ ಮಾಡೋಣ.

ಸಧ್ಯಕ್ಕೆ.... ಇಷ್ಟು ಸಾಕು ಅಲ್ವ. ಎಲ್ಲಾ ಬರೆದರೆ ಇನ್ನೊಂದು ಸಲ ಭೇಟಿ ಆದಾಗ ಜಗಳಾಡೋಕ್ಕೆ ಕಾರಣಗಳು ಬೇಡವೆ?.... ನಿನ್ನೆಲ್ಲ ಒಣ ಪಾಂಡಿತ್ಯದ ಒಳಗೆ ಸೇರಿರೊ ಕಾಡುವ ಕೆಣಕುವ ಕೀಟಲೆ ಮಾಡುವ ತುಂಟ ಹುಡುಗೀನ ನನಗೆ ಆಗಾಗ ಬಿಡುಗಡೆ ಮಾಡ್ತ ಇರು—

ಹಾಗಾದರೆ ಈ ಪತ್ರ ವ್ಯವಹಾರದ ತುಂಟಾಟಕ್ಕು ಅರ್ಥ ಬರುತ್ತೆ.

ಪ್ರೀತಿಯಿಂದ
ಶ್ರೀಧರ

- **ಮತ್ತೆ ಬರೆದ ಕತೆಗಳು**
  ಲೇ – ನೇಮಿಚಂದ್ರ
  ಪ್ರ– "ಶ್ರೀ ಪ್ರಕಾಶನ" 401, ವಿಜಯ್ ಟವರ್ಸ್
  ಎರಡನೇ ಮುಖ್ಯರಸ್ತೆ, ಆರ್. ಪಿ. ಸಿ. ಲೇ ಔಟ್.
  ವಿಜಯನಗರ ಎರಡನೇ ಹಂತ, ಬೆಂಗಳೂರು-40
  ಪು. 136 vii ಬೆಲೆ : ರೂ. 30/-

ಮುಗಿಸುವ ಮುನ್ನ

ಮಾಧವ ಐತಾಳ್

ಅಸ್ತಂಗತ ನರ್ಮದಾಯಿ

ನರ್ಮದಾ ರಕ್ಷಿಸಿ ಆಂದೋಳನದ ಕಛೇರಿ "ನರ್ಮದಾಯಿ" ಮತ್ತು 800 ವರ್ಷಗಳ ಇತಿಹಾಸವಿದ್ದ ಶೂರ್ಪಣೇಶ್ವರ ದೇವಸ್ಥಾನ ಮೊನ್ನೆ (ಜುಲೈ 16) ನರ್ಮದೆಯ ನೀರಿನಲ್ಲಿ ಮುಳುಗಿತು. ಮೇಧಾಪಾಟ್ಕರ್, ಬಾಬಾ ಆಮಟೆ ಮತ್ತು ಕಾರ್ಯಕರ್ತರು ಜಲಸಮರ್ಪಣೆಯ ಕಾರ್ಯಕ್ರಮವನ್ನು ಕೈಬಿಟ್ಟರು. ಪುನರ್ ವಿಮರ್ಶೆಯನ್ನು ಒಪ್ಪಿದ್ದ ಶುಕ್ಲಾ ನಂತರ ಗಾಂಧೀನಗರದ ಬೃಹಸ್ಪತಿಗಳ ಒತ್ತಡಕ್ಕೆ ಬಗ್ಗಿ, ಪುನರ್‌ವಿಮರ್ಶೆಯು ಅಸಾಧ್ಯ ಎಂದದ್ದನ್ನು ಪ್ರಧಾನಿಯೂ ಒಪ್ಪಿದರು. ಈ ಪ್ರಭೃತಿಗಳ ಗೋಸುಂಬೆತನಕ್ಕೆ ಜನ ತೆರಬೇಕಾದ ಬೆಲೆ ಏನು ? ಮಾರ್ಸ್ ಸಮಿತಿ, ಸ್ಕಡ್ಡರ್ ಸಮಿತಿ, ಕುಪಮೇಲಾ ಕಾಕ್ಸ್ ಸಮಿತಿ, ನರ್ಮದಾ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ಇವೆಲ್ಲವೂ ಈ ಯೋಜನೆಯಿಂದಾಗಬಹುದಾದ ಪರಿಸರ ನಾಶ ಮಾನವ ಹಕ್ಕುಗಳ ಉಲ್ಲಂಘನೆ, ಜನಾರೋಗ್ಯದ ಮೇಲಿನ ತೀವ್ರ ವಿಪರಿಣಾಮದ ಬಗ್ಗೆ ಸ್ಪಷ್ಟ ಮಾತುಗಳಲ್ಲಿ ಹೇಳಿವೆ.

ವಿಶ್ವಅಭಿವೃದ್ಧಿ ವರದಿ, 1993ರ ಕರ್ತೃ ಡಾ. ಮಹಬೂಬ್ ಹಕ್ಕರ ಪ್ರಕಾರ "ಅಭಿವೃದ್ಧಿ ಎಂದರೆ ಜನರ ಆಯ್ಕೆಯ ವಿಸ್ತಾರವನ್ನು ಹೆಚ್ಚಿಸುವುದು" ಕಡಿಮೆ ಜನರ ಅತ್ಯಾಸೆ ತೀರಿಸುವ ಬದಲು ಹೆಚ್ಚು ಜನಗಳ ಅಗತ್ಯ ಪೂರೈಕೆ ಯೋಜನೆಗಳ ಗುರಿಯಾಗಬೇಕು

ಹಿಂಸೆ, ಭ್ರಷ್ಟಾಚಾರ, ಅಸಮಾನತೆ ಮತ್ತು ಹಿಡಿಜನರ ಹಿತವನ್ನೇ ಗುರಿಯಾಗಿಸಿಕೊಂಡ ಇಂತಹ ಯೋಜನೆಗಳು ನಮ್ಮ ಪ್ರಜ್ಞೆಗೊಂದು ಸವಾಲು. ಎಷ್ಟು ಕಾಲ ನಾವು ಇವುಗಳನ್ನು ಮೌನವಾಗಿ ಸಹಿಸುವುದು ?

ಅರವತ್ತರ ಮನೋಹರ ಗ್ರಂಥಮಾಲೆ

ಧಾರವಾಡದ 'ಗೆಳೆಯರ ಗುಂಪು' ನಮ್ಮ ಸಾಹಿತ್ಯ ಲೋಕದ ಚಿರಪರಿಚಿತ ಇತಿಹಾಸ. ಒಡೆದ ಈ ಗುಂಪಿನಿಂದ ಸಾಹಿತ್ಯ ಕಾರ್ಯದ ಮುಂದುವರಿಕೆಯಾಗಿ 1933ರಲ್ಲಿ ಮೈತಳೆದ ಮ.ಗ್ರ.ಮಾ ಆಧುನಿಕ ಕನ್ನಡ ಸಾಹಿತ್ಯ ಕಂಡ ಎಲ್ಲ ಏಳಿತಗಳನ್ನು ಕಾಣುತ್ತಾ, ಪ್ರಕಟಣೆಯ ಉದ್ಯಮ ಒಂದು ವ್ಯಾಪಾರವಾಗದೆ ನಡೆದು

ಬಂದಿದೆ. ನೂರಾರು ಪುಸ್ತಕಗಳ ಪ್ರಕಟಣೆಯ ಹೆಮ್ಮೆಯ ಜೊತೆಗೆ ಅಯಾಕಾಲದ ಅನೇಕ ಲೇಖಕರನ್ನ ಬೆಳೆಸಿ ಪ್ರೋತ್ಸಾಹಿಸಿದೆ. ಅವರೆಲ್ಲರ ಹಸ್ತಪ್ರತಿ ಫೋಟೋ ಇತ್ಯಾದಿ ನೆನಪುಗಳ ಭಂಡಾರವಾಗಿರುವ ಮಗ್ರಮಾ ಧಾರವಾಡದ ಸಾಹಿತಿಗಳ ಕೇಂದ್ರವೂ ಹೌದು. ಈ ಎಲ್ಲ ಚಟುವಟಿಕೆಗಳ ಕೇಂದ್ರವಾಗಿರುವ ಹಿರಿಯರಾದ ಜಿ. ಬಿ. ಜೋಷಿ ಅವರ ಛಲ ಹಾಗೂ ಶ್ರದ್ಧೆಯ ಫಲ ಇದು, ಸದಾ ಹೊಸತರ ಕದ ಬಡಿಯುವ ಮಗ್ರಮಾ ತನ್ನ ನೂರನ್ನು ದಾಟಿ ನಿರಂತರ ಬಾಳಲಿ ಎನ್ನುವುದು ನಮ್ಮೆಲ್ಲರ ಹಾರೈಕೆ.

ಹಿರೋಶಿಮಾ, ಪ್ರೀತಿಯ ಹಿರೋಶಿಮಾ

ಅದು ದ್ವಿತೀಯ ಮಹಾಯುದ್ಧದ ಕೊನೆಯ ಹಂತ. ಮ್ಯಾನ್‌ಹಟನ್ ಯೋಜನೆಯಿಂದ ತಯಾರಾದ ಅಣುಬಾಂಬ್. ಅಮೆರಿಕಾದ ಅಮಾನವೀಯ ಅಧ್ಯಕ್ಷ ಟ್ರೂಮನ್ನನ ಆದೇಶದಂತೆ ಜಪಾನಿನ ಮೇಲೆ ಪ್ರಯೋಗಿಸಲ್ಪಟ್ಟಿತು. ಹಿರೋಶಿಮಾ ನಾಗಸಾಕಿಯ ಮೇಲೆ ಆಗಸ್ಟ್ 6ರಂದು ಹಾಕಿದ 'ಲಿಟ್ಲ್‌ಬಾಯ್' ಮತ್ತು ಆಗಸ್ಟ್ 9ರಂದು ನಾಗಸಾಕಿಯು ಮೇಲೆ ಹಾಕಿದ 'ಫ್ಯಾಟ್‌ಮ್ಯಾನ್'ನಿಂದ ಎರಡು ಲಕ್ಷಕ್ಕೂ ಹೆಚ್ಚಿನ ಸಾವು, ನಗರ ಧೂಳೀಪಟ ಅಪಾರ ನಷ್ಟ. ಸೋತೇ ಹೋಗಿದ್ದ ಜಪಾನಿನ ಜನರ ಮೇಲೆ ಸಾಮ್ರಾಜ್ಯಶಾಹಿ ದುರಾಶೆಯ ಜನ ನಡೆಸಿದ ಅಮಾನವೀಯ ಅತ್ಯಾಚಾರ ಅದು. ಅಂದು ವಿಕಿರಣಶೀಲ ಜನರಿಗೆ ಹುಟ್ಟಿದ ಜನರು ಇಂದಿಗೂ ಸಾಯುತ್ತಿದ್ದಾರೆ. ಅಂಗವಿಕಲ ಮಕ್ಕಳು, ಬುದ್ಧಿಮಾಂದ್ಯ ಮಕ್ಕಳು ಇಂದೂ ಹುಟ್ಟುತ್ತಿವೆ. 1992ರಲ್ಲಿ ಸತ್ತ 'ಹಿಬಾಕುಷ'ರ ಸಂಖ್ಯೆ 4000ದಷ್ಟಿತ್ತು. ಪರಮಾಣುವಿನ ಇನ್ನೊಂದು ಮುಖ ನಮ್ಮ ವಿಜ್ಞಾನಿಗಳು ಘೋಷಿಸುವ 'ಅಣುಶಕ್ತಿಯ ಶಾಂತಿಯುತ ಬಳಕೆ' ಎಂಬ ಮಾತು ಅಸಂಗತ. ಕ್ಷೇಮ ಎಂದೆನ್ನಿಸಿಕೊಳ್ಳುವ ಅಣುತಂತ್ರಜ್ಞಾನ ಇನ್ನೂ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ. ಉಕ್ರೈನ್, ತ್ರಿಮೈಲ್‌ದ್ವೀಪ, ಚೆರ್ನೊಬಿಲ್. ಪುಶುಹಾಮ, ನರೋರಾ....ಹೀಗೆ ಅಪಘಾತಗಳ ಸಾಲು ಸಾಲೇ ಇದ್ದರೂ ಭಾರತದಲ್ಲಿ ಅಣುಗೋರಿಗಳು ಹೆಚ್ಚುತ್ತಲೇ ಇವೆ. ಕರ್ತವ್ಯನಿಷ್ಠ. ಪ್ರಾಮಾಣಿಕತೆಯ ಅಧಿಕಾರಿಗಳನ್ನು ಇಲಾಖೆಯ ಭ್ರಷ್ಟ, ಅಧಿಕಾರ ಲಾಲಸೆಯ ಕೂಟ ಹಿಂಸಿಸುತ್ತಿದೆ. ಬುದಿಕೋಟ ಸುಬ್ಬರಾವ್, ಮೊರ್ಧ್ಯಾಶಾ ವಾಸುಸು ಸತ್ಯ ನುಡಿದಿದ್ದಕ್ಕಾಗಿಯೇ ಹಿಂಸೆಗೊಳಗಾಗುತ್ತಾರೆ. ಅಣುಶಕ್ತಿ ಇಲಾಖೆ ಜನರಿಗೆ ಉತ್ತರ ಹೇಳಬೇಕಾಗಿಲ್ಲ. ಪ್ರಶ್ನಿಸಿದವರನ್ನು 1962ರ ಅಣುಶಕ್ತಿ ಇಲಾಖೆ ಕಾಯಿದೆ ಬಳಸಿ ಜೈಲಿಗೆ ತಳ್ಳಬಹುದು ಗೋಪ್ಯ, ಅಪಾಢಭೂತಿತನ, ಗೋಸುಂಬಿತನ, ಅಧಿಕಾರ ಲಾಲಸೆ ಮತ್ತು ಭ್ರಷ್ಟತೆಯ ಕೂಪದಲ್ಲಿ ಮುಳುಗಿರುವ ನಮ್ಮ ವಿಜ್ಞಾನಿಗಳು ಜನರಿಗೆ ಸುಳ್ಳು ಹೇಳುತ್ತಲೇ ನಡೆದಿದ್ದಾರೆ. ಅಣುಶಕ್ತಿಯೆಂಬುದು ಯಮಶಕ್ತಿ, ಅದಕ್ಕೆ ಇತಿಶ್ರೀ ಹಾಡಲು ಜನ ಶಕ್ತಿಯಿಂದ

ಮಾತ್ರ ಸಾಧ್ಯ. ಅಲ್ಲಿಯವರೆಗೆ ಅಣುಗೋರಿಯೆಡೆಗೆ ಜನರ ಪಯಣ ಸಾಗುತ್ತಲೆ ಇರುತ್ತದೆ.

ಕಾಂಡ್ಲಾ ಸತ್ಯಾಗ್ರಹ

ಕರ್ನಾಟಕದಲ್ಲಿ ರೈತಸಂಘದಿಂದ ವಿರೋಧಿಸಲ್ಪಡುತ್ತಿರುವ ಕಾರ್ಗಿಲ್ ಸಂಸ್ಥೆ ಗುಜರಾತ್ ತೀರದ ಕಾಂಡ್ಲಾದಲ್ಲಿ ಇನ್ನೊಂದು ಜನವಿರೋಧಿ ಕೆಲಸಕ್ಕೆ ಕೈಹಾಕಿದೆ. ಉಪ್ಪಿನ ಉತ್ಪಾದನೆ ಮತ್ತು ಖಾಸಗಿ ಕೆಲಸವೊಂದರ ಸ್ಥಾಪನೆಗಾಗಿ 15,000 ಎಕರೆ ಜಮೀನನ್ನು ಗುತ್ತಿಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದೆ. ಸರ್ಕಾರ ತನ್ನದೇ ನಿಯಮಗಳನ್ನು ಮೀರಿ, ವಾಷಿಂಗ್ಟನ್‌ನ ದೊರೆಗಳನ್ನು ಮೆಚ್ಚಿಸಲು ನಿಯಮಗಳನ್ನು ತಿದ್ದಿ, ಜಮೀನಿನ ಪರಭಾರೆಗೆ ಒಪ್ಪಿದೆ. ಗಾಂಧಿಧಾಮದ ನ್ಯಾಯಾಲಯದಿಂದ ಜನ ನಿರ್ಮಾಣಕಾರ್ಯಕ್ಕೆ ತಡೆಯಾಜ್ಞೆ ತಂದಿದ್ದಾರೆ. ಡಂಕಲ್ ಪ್ರಸ್ತಾವನೆಯನ್ನು ಭಾರತ ಸರ್ಕಾರ ಒಪ್ಪಿದರೆ, ಅದರಿಂದ ನೇರಲಾಭ ಹೊಂದುವ ಬಹುರಾಷ್ಟ್ರೀಯ ಕಂಪನಿಗಳಲ್ಲೊಂದಾದ ಕಾರ್ಗಿಲ್ ಸಂಸ್ಥೆಯ ಐರಿಷ್ ಒಡೆಯರಿಗೂ, ಅಮೇರಿಕಾದ ಅಧ್ಯಕ್ಷರಿಗೂ ಇರುವ ಸಂಬಂಧ ತೀರ ಆತ್ಮೀಯವಾದದ್ದು. ವಾಷಿಂಗ್ಟನ್‌ನ ದೊರೆಗಳನ್ನು ತೃಪ್ತಿಪಡಿಸುವುದನ್ನೇ ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡಿರುವ ನಮ್ಮ ನವ ಆರ್ಥಿಕ ಯೋಜನೆಗಳ ದುರಂಧರರ ಮೂರ್ಖತನಕ್ಕೆ ನರಳಬೇಕಾಗಿ ಬಂದದ್ದು ಸಾಮಾನ್ಯ ಜನರ ಬದುಕು.

ಇದೇ ರೀತಿ ಒರಿಸ್ಸಾದ ಚಿಲ್ಕಾ ಸರೋವರವನ್ನು ಟಾಟಾಸಂಸ್ಥೆಗೆ, ಗೋವಾದ ಸಾಗರದ ತೀರವನ್ನು ಡುಪಾಂಟ್ ಸಂಸ್ಥೆಗೆ, ಬಿಹಾರದ ಕಾಡುಗಳನ್ನು ಆಸ್ಟ್ರೇಲಿಯಾದ ವೈಟ್ ಸಂಸ್ಥೆಗೆ ಸರ್ಕಾರ ಮಾರಿಬಿಟ್ಟಿದೆ. ತನ್ನ ಪ್ರಚಾರ ಮಾಧ್ಯಮಗಳ ಮೂಲಕ ಅವ್ಯಾಹತವಾಗಿ ಸರ್ಕಾರ ವಿಶ್ವಮಾರುಕಟ್ಟೆ, ಅರ್ಥಿಕ ಸರಳೀಕರಣ, ಅಭಿವೃದ್ಧಿ-ಎಂಬ ಸುಳ್ಳನ್ನು ಜನರಿಗೆ ಉಣಿಸುತ್ತಿದೆ. ನಮ್ಮ ಜಲ, ನೆಲ, ಸಂಸ್ಕೃತಿ ಬಡವಾಗಿ ಸಾಯುವುದನ್ನು ತಪ್ಪಿಸಲು ನಾವು ನಮ್ಮೆಲ್ಲಾ ಶಕ್ತಿ, ಬುದ್ಧಿ, ವಿವೇಕವನ್ನು ಪಣಕ್ಕಿಟ್ಟು ಹೋರಾಡಬೇಕಾಗಿದೆ. ಗಾಂಧಿ ತನ್ನ ದಂಡಿಯಾತ್ರೆಯ ಕೊನೆಯಲ್ಲಿ ಹಿಡಿಉಪ್ಪನ್ನು ಎತ್ತಿಹಿಡಿದ ಅಭೂತಪೂರ್ವ ಕ್ರಿಯೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಚ್ಚಾಟನೆಗೆ ಬುನಾದಿ ಹಾಕಿತು. ಆ ಆತ್ಯಂತ ಸರಳಕ್ರಿಯೆ ಬೀರಿದ ಪರಿಣಾಮ ಅದ್ಭುತ. ಅದು ಅಂತಹ ಕ್ರಿಯಾಶಾಲಿ. ಪ್ರಗಲ್ಭ ಚಿಂತಕನೊಬ್ಬನಿಂದ ಮಾತ್ರ ಸಾಧ್ಯವಾಗಬಹುದಾದ ಕ್ರಿಯೆ. ಇಂದು ಎರಡನೇ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಗಿದೆ. ಅದೂ ಗಾಂಧಿಯ ನೆಲದಲ್ಲಿ, ಈ ಸತ್ಯಾಗ್ರಹ ಭಾರತದಲ್ಲಿ ನಮ್ಮ ನವ ನಾಗರೀಕ ಗ್ರಾಹಕರ ಬೇಡಿಕೆ ತೀರಿಸಲೆಂದೇ ಬಂದು ನೆಲೆಸಿರುವ ಬಹುರಾಷ್ಟ್ರೀಯ ಕಂಪನಿಗಳ ಉಚ್ಚಾಟನೆಗೆ ನಾಂದಿ ಹಾಡಲಿ.

ಮನದ ಹೂದೋಟದಲ್ಲಿ ... ಹೀಗೆ...

ಎಸ್. ವಿ. ಮಂಜುನಾಥ್

ಮನದ ಹೂದೋಟದ ಮೂಲೆಯಲಿ
ಒಲವಿನ ಸಸಿ
ನೀರೆರದು ನೀನೆಟ್ಟ ಬಗೆ
ಅನಿಸಲಿಲ್ಲ ಹೀಗೆ

ಮಣ್ಣ ಕೆದಕುವ ಎರೆಹುಳುವಿನಂತೆ
ನಾನಾಗಿ ಕೆದಕಿದೆ
ಇದಕಿನ್ನು ಅರ್ಥ
ಹುಡುಕಿ ಅರಿಯದೆ ನಿಂತೆ ಹಾಗೆ

ಸಂಜೆ ಮಬ್ಬಿನ ಕತ್ತಲು
ಬೆಳಲಿನಂತೆ
ನನ್ನ–ನಿನ್ನ ನಡುವೆ
ತಿರುಗಿಸಿತ್ತು ಅದನು ನೀನರಿಯದೆ ಹೋದೆ ಹೀಗೆ

ಪರಿಸ್ಥಿತಿಯೊತ್ತಡ ಚರಣವಿಲ್ಲದೆ
ಪಲ್ಲವಿಗೂ ಅಚ್ಚರಿ
ಮುಕ್ತಾಯ .... ನೀನಂತು
ಮುಖಾ ಮುಖಿಯಲಿ ಮೂಕಳಾದೆ ಹಾಗೆ

ಅಲೆಗಳುತ್ತರಿಸುತ್ತಿವೆ
'ಈ ಮರಳು ದಿನ್ನೆ
ನೀ ಕೂತ ಸನ್ನೆ ಉಸುಕಿನಲ್ಲಿದೆ
ಜೋಕೆ'
ಇಂತಿಷ್ಟು–ದಿನಗಳಷ್ಟು ಹೊಸೆದೆ–ನಲಿದೆ
ಬಯಕೆಗಳ ದಿಬ್ಬಣದಲಿ
ಕರಗುವ ಮೋಡಗಳು ಆಷಾಡದ ದಿನಗಳಲುದಿಸಿ
ಮನ ಪಂಜರದ ಸರಳು ಸಡಿಲವಾಗುತ್ತಿವೆ ಹೀಗೆ.... !

ಪುಸ್ತಕ ಸ್ವೀಕಾರ

* ಮತ್ತೊಂದು ಮೌನ (ಕಥೆಗಳು) ಲೇ : ಮಹಾಬಲಮೂರ್ತಿ ಕೊಡ್ಲೆಕೆರೆ
  ಲಿಪಿ ಪ್ರಕಾಶನ ಪು : 112 ಬೆಲೆ ರೂ. 25/–

* ಮಗುವಿನ ಹಾಡು (ಸಾಮರಸ್ಯ ಗೀತೆಗಳು) ಲೇ : ಬರಗೂರು ರಾಮಚಂದ್ರಪ್ಪ
  ವೈಚಾರಿಕ ಪುಸ್ತಕ ಮಾಲೆ ಪು : 32 ಬೆಲೆ : ರೂ6/–

* ಕವಿ ಸಂಹಾರ (ಕವಿತೆ) ಲೇ : ಸಿದ್ಧಲಿಂಗ ದೇಸಾಯಿ
  ಮಾನಸ ಪ್ರಕಾಶನ, ಪು : 55 ಬೆಲೆ : ರೂ 15/–

* ಕ್ಯಾದಗಿ ಜವುಳು ಮತ್ತು ಇತರ ಕವನಗಳು ಲೇ ; ಸಿದ್ದಲಿಂಗ ದೇಸಾಯಿ
  ಸಿ. ಎಸ್. ಸಾಧುನವರ ಪಬ್ಲಿಕೇಷನ್ ಪು : 100 ಬೆಲೆ : ರೂ 15/–

* ದೇಶ ಕೋಶ ದಾಸವಾಳ (ಕವಿತೆಗಳು) ಲೇ : ಮುಕುಂದರಾಜ್ ಎಲ್. ಎನ್
  ಸೂರ್ಯ ಪ್ರಕಾಶನ, ಪು : 70 ಬೆಲೆ : 30/–

* ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್
  ಲೇ : ಗಂಗಾರಾಮ್ ಚಾಂಡಾಳ, ಚೈತ್ರ ಪ್ರಕಾಶನ : ಬೆಲೆ 35/–

* ಕೊಟ್ಟ (ಕಾದಂಬರಿ) ಲೇ ; ಎಂ. ವೀರಪ್ಪ ಮೊಯಿಲಿ
  ಆಶಾ ಸಾಹಿತ್ಯ ಪ್ರಕಾಶನ ಬೆಲೆ ; ರೂ 140/–

ಈ ಸಂಚಿಕೆಯ ಲೇಖಕರು

* ಎಂ. ಆರ್. ಭಗವತಿ C/o ಸಂಚಯ, ಬೆಂಗಳೂರು
* ಕೆ. ವಿ. ಸುಬ್ಬಣ್ಣ, ನೀನಾಸಮ್, ಹೆಗ್ಗೋಡು (ಸಾಗರ)
  ಪಿನ್-577 417
* ಡಾ॥ ಸಿ. ಪಿ. ರವಿಕುಮಾರ್, ಇ. ಇ. ಡಿಪಾರ್ಟ್‌ಮೆಂಟ್
  ಐ.ಐ.ಟಿ. ಹಸ್ಸ್‌ಖಾನ್, ಹೊಸದೆಹಲಿ-110 016
* ವಿಜಯವಾರ್
  1152, ಚಾಮರಾಜಪುರಂ, ಮೈಸೂರು-570 004
* ಡಿ. ವಿ. ಪ್ರಹ್ಲಾದ್, ಶ್ರೀಧರಮೂರ್ತಿ ಎನ್. ಎಸ್.
  ಮಾಧವ ಐತಾಳ್ C/o ಸಂಚಯ
* ಎಸ್. ವಿ. ಮಂಜುನಾಥ್
  ಹೊಸಮನೆ ಎಕ್ಸ್‌ಟೆನ್‌ಷನ್, ಶಿವಮೊಗ್ಗ

ಟಿ. ಎಸ್. ಪ್ರತಿಭಾ ಈ ಸಂಚಯದ ಲಿನೋಕೃತಿಯ ಕಲಾವಿದೆ, ಪೇಂಟಿಂಗ್‌ನಲ್ಲಿ ತಮ್ಮ ಸ್ನಾತಕ ಪದವಿಯನ್ನು ಸುಪ್ರಸಿದ್ಧ ಶಾಂತಿನಿಕೇತನದಿಂದ ಪಡೆದಿರುವ ಈಕೆ ಪ್ರಸ್ತುತ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಲಲಿತಕಲಾ ಶಾಲೆಯಲ್ಲಿ ಪೇಂಟಿಂಗ್ ವಿಭಾಗದ ಅಧ್ಯಾಪಕಿಯಾಗಿದ್ದಾರೆ. ಲಿನೋಕಟ್ ತಯಾರಿಸಿಕೊಟ್ಟ ಪ್ರತಿಭಾ ಅವರಿಗೆ ಸಂಚಯದ ಕೃತಜ್ಞತೆಗಳು.

ಇತ್ತೀಚೆಗೆ ಪ್ರತಿಭಾ ತಮ್ಮ ಸಹೋದ್ಯೋಗಿಗಳಾದ ಶ್ರೀಧರಮೂರ್ತಿ ಮತ್ತು ಕೃಷ್ಣರಾಜೇಂದ್ರ ಕುಮಾರ್ ಅವರ ಜೊತೆಗೆ, ಬೆಂಗಳೂರಿನ ವೆಂಕಟಪ್ಪ ಕಲಾ ಶಾಲೆಯಲ್ಲಿ ತಮ್ಮ ಕಲಾ ಕೃತಿಗಳ ಪ್ರದರ್ಶನ ನಡೆಸಿದರು.

ಈ ಸಂಚಿಕೆಯಲ್ಲಿ...

ಮುಂದಿನ ಸಂಚಿಕೆ : ಎ. ಕೆ. ರಾಮಾನುಜನ್ ಅವರ ಬದುಕು–ಸಾಹಿತ್ಯ ಕುರಿತು
